ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 26 ಸೆಪ್ಟೆಂಬರ್ 9, 1979 40 ಪೈಸೆ

ರಾಜ್ಯದ ರಾಜಕೀಯ ಎತ್ತ ಸಾಗಿದೆ ?

ಕರ್ನಾಟಕದಲ್ಲಿ ಇತ್ತೀಚೆಗೆ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳು ಜನರನ್ನು ಚಕಿತಗೊಳಿಸುವಂಥವುಗಳಾಗಿವೆ. 1971 ರಿಂದ ಇಂದಿರಾ ಗಾಂಧಿಯವರ ಕೋಟೆಯಂತಿದ್ದ ಕರ್ನಾಟಕದಲ್ಲಿ ದೇವರಾಜ ಅರಸುರವರ ಸರಕಾರವು ಭದ್ರವಾಗಿತ್ತು. ಆದರೆ ಮೂರು ತಿಂಗಳ ಹಿಂದೆ ಅರಸುರವರನ್ನು ಇಂದಿರಾರವರು ತಮ್ಮ ಪಾರ್ಟಿಯಿಂದ ಹೊರಗೆ ಹಾಕಿದ ನಂತರ ಬಹುಸಂಖ್ಯಾತ ಕಾಂಗ್ರೆ ಶಾಸಕರು ಅರಸುರವರಿಗೆ ಬೆಂಬಲಕೊಟ್ಟು ಕರ್ನಾಟಕ ಕಾಂಗ್ರೆಸ್ ಅಸ್ತಿತ್ವಕ್ಕೆ ಬಂತು. ಕ್ರಮೇಣ ಕೆಲವು ಮಂತ್ರಿಗಳೂ, ಹಲವು ಶಾಸಕರೂ ಕಾಂಗ್ರೈಗೆ ಸೇರುತ್ತಾ ಬಂದರು. ಅರಸುರವರು ಶಾಸನ ಸಭೆಯಲ್ಲಿ ಬಹುಮತ ಕಳೆದುಕೊಂಡಿದ್ದಾರೆಂದೂ ಅವರು ರಾಜೀನಾಮೆ ಕೊಡಬೇಕೆಂದೂ ಅವರ ವಿರೋಧಿ ಗುಂಪು ರಾಜ್ಯಪಾಲರಿಗೆ ಒತ್ತಾಯಪಡಿಸಿತು. ರಾಜ್ಯಪಾಲರೂ ಸಹ ಶಾಸನ ಸಭೆಯನ್ನು ಕರೆಯಬೇಕೆಂಬ ಸೂಚನೆಯನ್ನು ಮುಖ್ಯ ಮಂತ್ರಿಯವರಿಗೆ ನೀಡಿದಂತಿದೆ. ಈ ತಿಂಗಳು 18ನೇ ತಾರೀಕಿಗೆ ಶಾಸನ ಸಭೆ ಸೇರುವ ಸಂಭವವಿದೆ. ಆಗ ಈ ಮಂತ್ರಿಮಂಡಲದ ಭವಿಷ್ಯ ನಿರ್ಧಾರವಾಗುವುದು.

ಸದ್ಯ ಅರಸುರವರ ಪಕ್ಷಕ್ಕೆ ಶಾಸನ ಸಭೆಯಲ್ಲಿ ಬಹುಮತವಿರುವಂತೆ ಕಾಣುತ್ತದೆ. ಜನತಾ ಪಕ್ಷದಿಂದಲೂ ಕೆಲವರು ಕರ್ನಾಟಕ ಕಾಂಗ್ರೆಸ್ಸಿಗೆ ಸೇರುವ

ಸಂಪಾದಕೀಯ

ಸಂಭವವಿದೆ. ಶ್ರೀ ಮಳ್ಳೂರು ಆನಂದರಾಯರು ಈಗಾಗಲೇ ಆ ಪಕ್ಷಕ್ಕೆ ಸೇರಿದ್ದಾರೆ. ಇನ್ನೂ ಅನೇಕರು ಸೇರಬಹುದು. ಜನತಾಪಕ್ಷವು ಸತ್ತು ಹೋಗಿದೆಂದೂ ಅದರ ಅಂತ್ಯಕ್ರಿಯೆಯನ್ನು ಮಾಡುವುದೊಂದೇ ಬಾಕಿ ಇರುವದೆಂದೂ ಶ್ರೀ ಜೆ. ಎಚ್. ಪಟೇಲರು ಹೇಳಿದ್ದಾರೆ. ರಾಜ್ಯ ಜನತಾಪಕ್ಷದ ಬಹುಸಂಖ್ಯಾತ ಶಾಸಕರು ಅರಸುರವರಿಗೆ ಬೆಂಬಲ ನೀಡುವ ಲಕ್ಷಣಗಳಿವೆ, ನಮ್ಮ ರಾಜ್ಯದಲ್ಲಿ ಜನತಾ ಪಕ್ಷದ ಸ್ಥಿತಿಯು ಚಿಂತಾಜನಕವಾಗಿರುವುದು ಸ್ಪಷ್ಟ.

ಜನತಾಪಕ್ಷದ ನಾಯಕರಲ್ಲೊಬ್ಬರಾದ ಶ್ರೀ ವೀರೇಂದ್ರ ಪಾಟೀಲರು ಈಗ ಇಂದಿರಾ ಕಾಂಗ್ರೆಸ್ಸಿಗೆ ಸೇರಿದ್ದಾರೆ. ಚಿಕ್ಕಮಂಗಳೂರಿನಲ್ಲಿ ನಡೆದ ಲೋಕಸಭಾ ಉಪಚುನಾವಣೆಯಲ್ಲಿ ಇಂದಿರಾರವರ ವಿರುದ್ಧ ಜನತಾಪಕ್ಷದ ಉಮೇದುವಾರರಾಗಿ ನಿಂತಿದ್ದ ಶ್ರೀ ಪಾಟೀಲರೇ ಈಗ ಇಂದಿರಾರವರಿಗೆ ಶರಣು ಹೋದದ್ದನ್ನು ನೋಡಿದರೆ ಈ ನಾಯಕರಲ್ಲಿ ರಾಜಕೀಯ ಪ್ರಾಮಾಣಿಕತೆ ಎಷ್ಟರ ಮಟ್ಟಿಗಿದೆಂಬುದು ಜನರಿಗೆ ಅರ್ಥವಾಗುವುದು. ಈ ರಾಜಕೀಯ ದೊಂಬರಾಟದಲ್ಲಿ ಯಾರು ಯಾರ ಕಡೆಯೆಂಬುದನ್ನು ಹೇಳಲು ಸಾಧ್ಯವಿಲ್ಲ.

ಇಂದಿರಾರವರ ಬಲಗೈಯಂತಿದ್ದ ಶ್ರೀ ದೇವರಾಜ ಅರಸುರವರು ಇಂದಿರಾರವರ ಸರ್ವಾಧಿಕಾರಿ ಕ್ರಮಗಳ ವಿರುದ್ಧ ಬಂಡಾಯವೆದ್ದಂದಿನಿಂದ

[ಕಡೆಯ ಪುಟ ನೋಡಿ]

ರಾಜ್ಯಸಮಿತಿ ನಿಧಿಗೆ ಉದಾರ ಸಹಾಯ ನೀಡಲು ಕರೆ

ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯವಾಗಿ ಸರಿಯಾದ ಧೋರಣೆಯನ್ನು ಅನುಸರಿಸಿಕೊಂಡು ಬಂದು, ಶ್ರಮಜೀವಿಗಳ ಮತ್ತು ಜನತೆಯ ಹಿತಕ್ಕಾಗಿ ತ್ಯಾಗ ಬಲಿದಾನಗಳನ್ನು ಮಾಡಿ, ಕಾರ್ಮಿಕವರ್ಗದ ಸಿದ್ಧಾಂತವನ್ನು ಎತ್ತಿಹಿಡಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಇಂದು ರಾಷ್ಟ್ರದ ರಾಜಕೀಯದಲ್ಲಿ ನಿರ್ದಿಷ್ಟವಾದ ಪಾತ್ರವನ್ನು ವಹಿಸುವುದು ಸಾಧ್ಯವಾಗಿದೆ. ಪಕ್ಷದ ಪ್ರಭಾವವೂ ಸಂಘಟನೆಯೂ ಎಲ್ಲಾ ಕಡೆ ಪಸರಿಸುತ್ತಿದೆ. ಕರ್ನಾಟಕ ರಾಜ್ಯದಲ್ಲೂ ಇಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಮತ್ತದರ ಸಾಮೂಹಿಕ ಸಂಘಟನೆಗಳು ತೀವ್ರಗತಿಯಿಂದ ಬೆಳೆಯುತ್ತಲಿವೆ. ಪಕ್ಷದ ಪ್ರಭಾವವು ವಿಸ್ತರಿಸುತ್ತಲಿದೆ.

ಸಾಲ್ಕಿಯಾದಲ್ಲಿ ಸೇರಿದ ಪಕ್ಷದ ಪ್ಲೀನಮ್ ಇಂದಿನ ಬೆಳವಣಿಗೆಯ ಪರಿಸ್ಥಿತಿಯನ್ನು ಉಪಯೋಗಿಸಿ ಮುನ್ನಡೆಯಲು ಸಾಧ್ಯವಾಗಬೇಕಾದಲ್ಲಿ ತೆಗೆದುಕೊಳ್ಳಬೇಕಾದ ಸಂಘಟನಾಕ್ರಮಗಳಿಗೆ ಮಾರ್ಗದರ್ಶನವಿತ್ತಿದೆ. ರಾಜ್ಯದಲ್ಲಿ ಪಕ್ಷವೂ, ಸಾಮೂಹಿಕ ಸಂಘಟನೆಗಳೂ ಸರಿಯಾಗಿ ಮುನ್ನಡೆಯಬೇಕಾದರೆ ರಾಜ್ಯಸಮಿತಿಯು ಬಲಿಷ್ಟ ಕೇಂದ್ರ ಅವಶ್ಯ. ರಾಜ್ಯದ ದಿನನಿತ್ಯದ ರಾಜಕೀಯದಲ್ಲಿ ಮಧ್ಯಪ್ರವೇಶ ಮಾಡುವುದು, ಬೆಳೆದು ಬರುವ ಹೋರಾಟಗಳಿಗೆ ನೇತೃತ್ವ ವೀಯುವುದು, ಸೌಹಾರ್ದ ಬೆಂಬಲಗಳನ್ನು ಸಂಘಟಿಸುವುದು, ಪ್ರಚಾರ ಪ್ರಕ್ಷೋಭೆಗಳನ್ನು ನಡೆಸುವುದು ಮೊದಲಾದ ಕೆಲಸಗಳಿಗೆ ಆದ್ಯತೆ ಈಯಬೇಕಾಗಿದೆ. ಕಾರ್ಯಕರ್ತರನ್ನು ಸೇರಿಸಿ ತುರ್ತಾಗಿ ರಾಜಕೀಯ ತರಬೇತಿ ನೀಡುವುದುಅವಶ್ಯ. ಇವೆಲ್ಲಾ ಕೆಲಸಗಳನ್ನು ನಡೆಸಲು ರಾಜ್ಯಸಮಿತಿಗೆ ಸಾಕಷ್ಟು ಹಣಕಾಸಿನ ವ್ಯವಸ್ಥೆಯಾಗಲೇಬೇಕು. ರಾಜ್ಯಸಮಿತಿಯ ಆಫೀಸಿನ ವ್ಯವಸ್ಥೆ, ಪೂರ್ಣಕಾಲ ಕಾರ್ಯಕರ್ತರಿಗೆ ವ್ಯವಸ್ಥೆ, ಓಡಾಟದ ವೆಚ್ಚ ಮೊದಲಾದುವುಗಳ ಬಗ್ಗೆ 1979-80 ನೇ ಇಸವಿಗೆ ಕನಿಷ್ಟ ಮೂವತ್ತು ಸಹಸ್ರ ರೂಪಾಯಿ ಅವಶ್ಯವಿದೆ. ತಾ. 5-8-79ರಂದು ಸೇರಿದ್ದ ರಾಜ್ಯಸಮಿತಿಯು, ಈ ನಿಧಿಯನ್ನು ಸಂಗ್ರಹಿಸಲು ತೀರ್ಮಾನಿಸಿತ್ತು. 1979 ಅಕ್ಟೋಬರ್ ಕೊನೆಯೊಳಗೇ ರಾಜ್ಯದಾದ್ಯಂತ ನಿಧಿ ಸಂಗ್ರಹವನ್ನು ಮುಗಿಸಬೇಕೆಂದು 2-9-79ರಂದು ಕೆ.ಜಿ.ಎಫ್. ನಲ್ಲಿ ಸೇರಿದ್ದ ರಾಜ್ಯಸಮಿತಿ ಸಭೆಯು ನಿರ್ಧರಿಸಿದೆ. ಪಕ್ಷದ ಎಲ್ಲಾ ಘಟಕಗಳೂ, ಸದಸ್ಯರೂ, ಹಿತೈಷಿಗಳೂ, ಗೆಳೆಯರೂ ಉದಾರ ಸಹಾಯ ನೀಡಬೇಕೆಂದು ರಾಜ್ಯಸಮಿತಿಯು ವಿನಂತಿಸುತ್ತದೆ. ಪಕ್ಷವು ತನ್ನ ರಾಜಕೀಯ ಜವಾಬ್ದಾರಿಯನ್ನು ನಿರ್ವಹಿಸಲು ಬೆಂಬಲವೀಯಲು ಕರೆಯೀಯುತ್ತದೆ. ●

ಸೆಪ್ಟೆಂಬರ್ 13 ರಂದು ರಾಜ್ಯದಾದ್ಯಂತ ಸೌಹಾರ್ದ ಕಾರ್ಯಕ್ರಮಕ್ಕೆ ಕರೆ

ಕೆ. ಜಿ. ಎಫ್. ನಲ್ಲಿ ಬೃಹತ್ ಸಭೆ

ಕರ್ನಾಟಕ ರಾಜ್ಯ ಸಿ.ಐ.ಟಿ.ಯು. ರಾಜ್ಯಮಂಡಳಿ ಸದಸ್ಯರು ಮತ್ತು ಕೆಲವು ಆಮಂತ್ರಿತರಿಗೆ ತಾ. 31-8-1979 ಮತ್ತು 1-9-1979 ರಂದು "ಜಾಗತಿಕ ಕಾರ್ಮಿಕ ವರ್ಗದ ಚಳುವಳಿಯ ಇತಿಹಾಸ" ಎಂಬ ವಿಷಯದ ಮೇಲೆ ಕೆ.ಜಿ.ಎಫ್. ನಲ್ಲಿ ಶಾಲೆಯನ್ನು ಏರ್ಪಡಿಸಲಾಗಿತ್ತು. ಶಾಲೆ ಪ್ರಾರಂಭವಾಗುವ ಮೊದಲು ಕಾಂ. ಮೂಸಬ್ಬ ಅವರಿಂದ ಕೆಂಪು ಧ್ವಜಾರೋಹಣವಾಯಿತು. ಮೈಸೂರು ಮೈನ್ ವರ್ಕರ್ಸ್ ಯೂನಿಯನ್ ಅಧ್ಯಕ್ಷರಾದ ಕಾಂ. ಕಣ್ಣನ್ ಎಲ್ಲರನ್ನೂ ಸ್ವಾಗತಿಸಿ ಮಾತನಾಡಿದರು. ಸಿ.ಐ.ಟಿ.ಯು.ವಿನ ಅಖಿಲ ಭಾರತ ಕಾರ್ಯದರ್ಶಿ ಕಾಂ. ಎಂ. ಕೆ. ಪಂಧೆಯವರು ಜಾಗತಿಕ ಕಾರ್ಮಿಕ ವರ್ಗದ ಚಳುವಳಿಯನ್ನು ವಿವರವಾಗಿ ಎರಡು ದಿನ ಬೋಧಿಸಿದರು.

2-9-1979ರಂದು ಸಿ.ಐ.ಟಿ.ಯು. ರಾಜ್ಯಸಮಿತಿಯ ಸಭೆ ಸೇರಿತು. ಆ ದಿನ ಸಾಯಂಕಾಲ ಕೆ.ಜಿ.ಎಫ್.ನ ಗಣಿ ಮತ್ತು ಬೆಮೆಲ್‌ನ ನೂರಾರು ಕಾರ್ಮಿಕರು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಮೆರವಣಿಗೆ ನಂತರ ನಡೆದ ಬೃಹತ್ ಸಭೆಯನ್ನುದ್ದೇಶಿಸಿ ತಮಿಳುನಾಡಿನ ಸಿ.ಐ.ಟಿ.ಯು.ವಿನ ಕಾರ್ಯದರ್ಶಿ ಹಾಗೂ ವಿಧಾನಸಭಾ ಸದಸ್ಯರು ಆದ ಕಾಂ. ಉಮಾನಾಥ ಮಾತನಾಡಿದರು. ಅವರು ಮಾತನಾಡುತ್ತಾ, ಹಿಂದಿನ ಜನತಾ ಸರಕಾರವು ಜನರಿಗಿತ್ತ ಆಶ್ವಾಸನೆಗಳನ್ನು ಕಾರ್ಯಗತಗೊಳಿಸಲು ವಿಫಲವಾಗಿ, ಕೃಷಿರಂಗದಲ್ಲಿ ವಿಫಲತೆ, ಔದ್ಯಮಿಕ ನೀತಿಯಲ್ಲಿ ತಪ್ಪು ಧೋರಣೆ, ಏರುತ್ತಿರುವ ಬೆಲೆಗಳು, ಕೋಮು ಗಲಭೆಗಳು ವಿದ್ಯಾರ್ಥಿಗಳ ಅಶಾಂತಿ, ಪಕ್ಷದಲ್ಲಿ ಅಂತಃಕಲಹ ಇವೆಲ್ಲವುಗಳಿಂದ ಅಧಿಕಾರ ಕಳೆದುಕೊಳ್ಳಬೇಕಾಯಿತೆಂದು ತಿಳಿಸಿದರು. ಕಾರ್ಮಿಕವರ್ಗವು ಸರ್ವಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳನ್ನು ಸದೆಬಡಿಯಲು ಕಂಕಣಬದ್ಧವಾಗಿ ಹೋರಾಡಬೇಕೆಂದೂ, ದೇಶದಲ್ಲಿರುವ ಅಸಮಾನತೆಯನ್ನು ತೊಲಗಿಸಲು ಹಾಗೂ ಸಾಮಾಜಿಕ ನ್ಯಾಯ ದೊರಕಿಸಿಕೊಳ್ಳಲು ಕಾರ್ಮಿಕರೆಲ್ಲಾ ಒಗ್ಗಟ್ಟಾಗಿ ಪ್ರಯತ್ನಿಸಬೇಕೆಂದು ಕೇಳಿಕೊಂಡರು. ಸೆಪ್ಟೆಂಬರ್ 14ರಂದು ನಡೆಯುವ ಸಾರ್ವಜನಿಕ ವಲಯದ ಕೆಲಸಗಾರರ ಅಖಿಲ ಭಾರತ ಮುಷ್ಕರಕ್ಕೆ ರಾಜಕೀಯ ಪಕ್ಷ, ಪಂಗಡ ಭೇದಗಳನ್ನು ಮರೆತು ಎಲ್ಲರೂ ಸಹಕರಿಸಬೇಕೆಂದು ವಿನಂತಿಸಿಕೊಂಡರು. ಸಿ ಐ ಟಿ.ಯು ವಿನ ಅಧ್ಯಕ್ಷರಾದ ಕಾಂ. ಸೂರ್ಯನಾರಾಯಣ ರಾವ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕಾರ್ಮಿಕ ಮುಖಂಡರುಗಳಾದ ಕಾಂ.ಮಹಮದ್ ದಸ್ತಗಿರ್, ಕಾಂ. ಪಿ. ರಾಮಚಂದ್ರ ರಾವ್, ಕಾಂ. ವಿ.ಜೆ.ಕೆ. ನಾಯರ್, ಕಾಂ. ಸವರೀದಾಸ್ ಮತ್ತು ಕಾಂ. ದೇವಕಿಯವರು ಮಾತನಾಡಿದರು. ಮೈಸೂರು ಮೈನ್ ವರ್ಕರ್ಸ್ ಯೂನಿಯನ್ನಿನ ಅಧ್ಯಕ್ಷರಾದ ಕಾಂ. ಕಣ್ಣನ್ ಮೊದಲು ಸ್ವಾಗತ ಭಾಷಣ ಮಾಡಿದರು. ಕಾಂ. ಟಿ.ಎಸ್. ಮಣಿಯವರು ವಂದನಾರ್ಪಣೆ ಮಾಡಿದರು.

3-9-79ರಂದು ಸಿ. ಐ. ಟಿ. ಯು ರಾಜ್ಯಮಂಡಳಿ ಸಭೆ ಸೇರಿತು. ಅಧ್ಯಕ್ಷತೆಯನ್ನು ಕಾಂ. ಎಸ್. ಸೂರ್ಯನಾರಾಯಣರಾವ್ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಜನವರಿಯಲ್ಲಿ ಮೈಸೂರಿನಲ್ಲಿ ಮಂಡಳಿಯ ಸಭೆ ಸೇರಿದ ನಂತರದ ಈವರೆಗೆ ನಡೆದ ಕಾರ್ಮಿಕ ರಂಗದ ಬೆಳವಣಿಗೆಯ ವರದಿಯನ್ನು ಕೊಟ್ಟರು.

ಸೌಹಾರ್ದ ಕಾರ್ಯಕ್ರಮಕ್ಕೆ ಕರೆ:

ಮಂಡಳಿಯು ಇದೇ ಬರುವ ಸೆಪ್ಟೆಂಬರ್ 13ನ್ನು ದಾಂಡೇಲಿಯ ಎಲೆಕ್ಟ್ರೊ ಮೆಟಲರ್ಜಿಕಲ್ ಫೆಕ್ಟರಿಯ ಹೋರಾಡುತ್ತಿರುವ ಕಾರ್ಮಿಕರಿಗೂ, ಬೆಂಗಳೂರಿನಲ್ಲಿ ಮುಚ್ಚಿರುವ 15 ಮಾಂಸಾಹಾರಿ ಹೋಟೆಲಿನ ಕಾರ್ಮಿಕರಿಗೂ, ಬೆಂಗಳೂರು ದಕ್ಷಿಣ ತಾಲ್ಲೂಕಿನ "ರೋರಿಚ್ ಮತ್ತು ದೇವಿಕಾರಾಣಿ" ತೋಟದ ಹೋರಾಡುವ ಕಾರ್ಮಿಕರಿಗೂ ಹಾಗೂ ಇತರ ಹೋರಾಡುತ್ತಿರುವ ಕಾರ್ಮಿಕರಿಗೂ ಬೆಂಬಲ ಸೂಚಿಸಲು, ಸಿ.ಐ.ಟಿ.ಯು.ವಿಗೆ ಸೇರಿದ ಎಲ್ಲಾ ಸಂಘಗಳೂ ಸೌಹಾರ್ದ ದಿನವನ್ನಾಗಿ ಆಚರಿಸಬೇಕೆಂದು ಕರೆ ಕೊಟ್ಟಿತು. 13ರಂದು ಸಭೆ, ಮೆರವಣಿಗೆಗಳನ್ನು ಎಲ್ಲಾ ಕಡೆ ನಡೆಸಲು ಕರೆಯಿತ್ತಿತು.

[ಕಡೆಯ ಪುಟ ನೋಡಿ]

ಆಹಾರ: ಮಹಿಳೆಗೆ ಕಡಿಮೆ ಪುರುಷನಿಗೆ ಹೆಚ್ಚು – ಸರ್ಕಾರಿ ವರದಿ

[ನಮ್ಮ ವಿಶೇಷ ವರದಿಗಾರರಿಂದ]

ಮಹಿಳೆಯು ಊಟ-ತಿಂಡಿಯನ್ನು ಪುರುಷನಿಗಿಂತ ಕಡಿಮೆ ಪ್ರಮಾಣದಲ್ಲಿ ತಿನ್ನುತ್ತಾಳೆ. ಪುರುಷ ಹೆಚ್ಚು ತಿನ್ನುತ್ತಾನೆ. ಆದ್ದರಿಂದ ಮಹಿಳೆಗೆ ಪುರುಷನಿಗಿಂತ ಕಡಿಮೆ ಆದಾಯ ಸಿಕ್ಕಬೇಕು. ಈ ನಿಲುವನ್ನು ತಳೆದಿರುವವರು ಬೇರೆ ಯಾರೂ ಅಲ್ಲ, ನಿಲುವು ಕೇಂದ್ರ ಸರ್ಕಾರದ್ದು.

ಕೇಂದ್ರ ಸರ್ಕಾರವು ಈ ನಿಲುವನ್ನು ತನ್ನ ವರದಿಯೊಂದರಲ್ಲಿ ಪ್ರಕಟಿಸಿರುವುದನ್ನು ಬಯಲು ಮಾಡಿದವರು ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಹಾಗೂ ಪ್ರಮುಖ ಟ್ರೇಡ್ ಯೂನಿಯನ್ (ಸಿ. ಐ. ಟಿ ಯು.) ಧುರೀಣೆ ಕಾಂ. ವಿಮಲ ರಣದಿವೆ. ದುಡಿಯುವ ಮಹಿಳೆಯರ ಸಭೆಯೊಂದನ್ನು ಬೆಂಗಳೂರಿನಲ್ಲಿ ಇತ್ತೀಚೆಗೆ ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ದುಡಿಯುವ ಮಹಿಳೆಯು ಮನೆಯ ಹೊರಗಡೆ ಮತ್ತು ಮನೆಯ ಒಳಗಡೆ ಕೆಲಸಮಾಡುತ್ತಾಳಾಗಿ ಅವಳಿಗೇ ಹೆಚ್ಚು ಆಹಾರದ ಅಗತ್ಯವಿದೆ ಎಂದು ಹೇಳಿ 'ಮಹಿಳೆಗೆ ಕಡಿಮೆ ಆಹಾರ—ಕಡಿಮೆ ಆದಾಯ ಸಾಕು' ಎಂಬ ಕೇಂದ್ರ ಸರ್ಕಾರದ ಧೋರಣೆಯನ್ನು ಖಂಡಿಸಿದರು.

ಟ್ರೇಡ್ ಯೂನಿಯನ್‌ಗಳ ಅಲಕ್ಷ್ಯ:

ದುಡಿಯುವ ಮಹಿಳೆಯರ ಸಮಸ್ಯೆ-ಸಂಕಷ್ಟಗಳನ್ನು ಎತ್ತಿಕೊಂಡು ಹೋರಾಟ ಮಾಡದ ಎಲ್ಲ ಟ್ರೇಡ್ ಯೂನಿಯನ್ ಸಂಘಟನೆಗಳನ್ನು ಟೀಕಿಸಿದ ವಿಮಲ ರಣದಿವೆಯವರು, ಟ್ರೇಡ್ ಯೂನಿಯನ್‌ಗಳ ಅಲಕ್ಷ್ಯದ ಪರಿಣಾಮವಾಗೇ ದುಡಿಯುವ ಮಹಿಳೆಯರ ಸಂಘಟನೆ ರೂಪುಗೊಂಡಿತು ಎಂದರು. ಮದರಾಸ್‌ನಲ್ಲಿ ನಡೆದ ಸಂಘಟನೆಯ ಪ್ರಥಮ ಅಧಿವೇಶನದ ನಂತರ ದೇಶವಿದೇಶಗಳಿಂದ ಅದಕ್ಕೆ ಸ್ವಾಗತ ಮತ್ತು ಪ್ರೋತ್ಸಾಹ ಸಿಕ್ಕಿದೆ ಎಂದು ಹರ್ಷದಿಂದ ನುಡಿದ ಅವರು, ಅಂತರರಾಷ್ಟ್ರೀಯ ಟ್ರೇಡ್ ಯೂನಿಯನ್ ಫೆಡರೇಷನ್ ಅಧಿವೇಶನದಲ್ಲಿ ಭಾಗವಹಿಸಲು ತಮ್ಮ ಮಹಿಳಾ ಸಂಘಟನೆಗೆ ಆಮಂತ್ರಣ ಬಂದಿದೆ ಎಂದರು. ತಾವು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ದುಡಿಯುವ ಮಹಿಳೆಯರ ಸಂಘಟನೆ ಬೆಳೆದು ಬರುತ್ತಿದೆ ಎಂದು ಹೆಮ್ಮೆಯಿಂದ ಹೇಳಿದರು ವಿಮಲ ರಣದಿವೆ.

ಹತ್ತಿ ಗಿರಣಿ, ಬೀಡಿ, ಸಿಗಡಿ-ಕರ್ಮೀನು ಸಂಸ್ಕರಣ ಕೇಂದ್ರ, ಗೋಡಂಬಿ ಮುಂತಾದ ಉದ್ಯಮಗಳಲ್ಲಿ ದುಡಿಯುತ್ತಿರುವವರಲ್ಲಿ ಶೇ 90 ರಷ್ಟು ಮಹಿಳಾ ಕಾರ್ಮಿಕರೇ ಇದ್ದಾರೆಂದು ವಿಮಲ ರಣದಿವೆ ಹೇಳಿ, ಇವರ ಸೇವಾ ಸೌಲಭ್ಯಗಳು ಅತ್ಯಂತ ಕೆಟ್ಟಸ್ಥಿತಿಯಲ್ಲಿ ಇವೆ ಎಂದರು. ರೋಗಗ್ರಸ್ತ ವಾತಾವರಣದಲ್ಲಿ ದುಡಿಯುವ ಈ ಮಹಿಳೆಯರು ಬಹಳ ಬೇಗ ಟಿ.ಬಿ., ಕ್ಯಾನ್ಸರ್ ಅಂತಹ ರೋಗಗಳಿಗೆ ಬಲಿಯಾಗುತ್ತಾರೆ — ಇದರ ವಿರುದ್ಧ ಉತ್ತಮ ಸೇವಾ ಸೌಲಭ್ಯಗಳಿಗೆ ಮತ್ತು ವೈದ್ಯಕೀಯ ಸೌಲಭ್ಯಗಳಿಗೆ ದುಡಿಯುವ ಮಹಿಳೆಯರ ಸಂಘಟಿತ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಔದ್ಯಮೀಕರಣ: ನಿರುದ್ಯೋಗಕ್ಕೆ ದಾರಿ

ಕೈಗಾರಿಕಾರಂಗ ಮತ್ತು ಕೃಷಿ ರಂಗದಲ್ಲಿ ಔದ್ಯಮೀಕರಣವು ಜಾರಿಗೆ ಬರುತ್ತಿದೆ ಎಂಬುದನ್ನು ಗುರುತಿಸಿದ ವಿಮಲ ಅವರು ಔದ್ಯಮೀಕರಣವು ನಿರುದ್ಯೋಗಕ್ಕೆ ದಾರಿಮಾಡಿಕೊಡುತ್ತದೆ. ಅದರಲ್ಲೂ ಗ್ರಾಮಾಂತರ ಪ್ರದೇಶದ ಮಹಿಳಾ ಕೃಷಿಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಬತ್ತದ ಒಟ್ಟು ಸಂಸ್ಕರಣ ಕೇಂದ್ರದಲ್ಲಿ ಬಂದ ಯಂತ್ರವೊಂದು 59,980 ಜನ ತಮ್ಮ ಕೆಲಸವನ್ನು ಕಳೆದುಕೊಳ್ಳುವಂತೆ ಮಾಡಿತು ಎಂದು ವಿಮಲ ರಣದಿವೆ ಉದಾಹರಿಸಿದರು. ಆದ್ದರಿಂದ ಅನಗತ್ಯ ಔದ್ಯಮೀಕರಣದ ವಿರುದ್ಧ ಸಂಘಟಿತ ಪ್ರತಿಭಟನೆಯನ್ನು ಕಾರ್ಮಿಕ ವರ್ಗ ತೋರಿಸಬೇಕು ಎಂದವರು ಕರೆಕೊಟ್ಟರು.

ಮಹಿಳೆ ಮಹಾ ಶೋಷಿತೆ:

ಮನೆಗೆಲಸ, ಮಕ್ಕಳ ಲಾಲನೆಪಾಲನೆ ಮತ್ತು ಹೊರಗಡೆಯೂ ದುಡಿಯುವುದು. ಇದು ದುಡಿಯುವ ಮಹಿಳೆಯ ದಿನನಿತ್ಯದ ಬದುಕು. ಇಷ್ಟೊಂದು ಕೆಲಸ ಮಾಡುವ ಮಹಿಳೆಗೆ ಈ ಸಮಾಜದಲ್ಲಿ ಏನು ಸಿಕ್ಕಿದೆ ಎಂದು ಪ್ರಶ್ನಿಸಿದ ವಿಮಲ ಅವರು ಪುರುಷನಿಗಿಂತ ಮಹಿಳೆಗೆ ಕಡಿಮೆ ವೇತನ ನೀಡುವ ಸಾಮಾಜಿಕ-ಆರ್ಥಿಕ ಪದ್ಧತಿಯನ್ನು ಉಗ್ರವಾಗಿ ಟೀಕಿಸಿದರು. ಮಹಾ ಶೋಷಿತೆಯಾದ ಮಹಿಳೆಯ ಮುಕ್ತಿಗೆ ಸಮಾನತೆಯಲ್ಲಿ ನಂಬಿಕೆ ಇರುವವರೆಲ್ಲರೂ ಮುಂದಾಗಿ ಬರಬೇಕೆಂದರು.

ಆಜನ್ಮ ಕನ್ಯೆ ಅಥವಾ ಕಳ್ಳವಿವಾಹ!

ವಿಮಾನಗಳಲ್ಲಿ ಪರಿಚಾರಿಕೆಯರಾಗಿ ಕೆಲಸ ಮಾಡುವ ಗಗನ ಸಖಿಯರು ವಿವಾಹವಾಗಬಾರದಂತೆ. ಆದರೂ ಮಕ್ಕಳನ್ನು ಹಡೆಯಬಾರದಂತೆ. ಹಡೆದರೂ ಒಂದು ಮಗುವಿನ ನಂತರ ಕೆಲಸಕ್ಕೆ ರಾಜೀನಾಮೆ ಕೊಡಬೇಕಂತೆ!

ವಿಮಾನಯಾನ ಸಂಸ್ಥೆಗಳ ಈ ನಿಯಮಗಳನ್ನು ಖಂಡಿಸಿದ ವಿಮಲರಣದಿವೆ ದುಡಿಯುವ ಮಹಿಳೆಯರು ಆಜನ್ಮ ಕನ್ಯೆಯರಾಗಿ ಉಳಿಯಬೇಕೇನು ಎಂದು ಪ್ರಶ್ನಿಸಿದರು. ಬೊಂಬಾಯಿಯ ಕಾರ್ಖಾನೆಯೊಂದರಲ್ಲಿ ದುಡಿಯುವ ಮಹಿಳೆಯರು ವಿವಾಹವನ್ನೇ ಮಾಡಿಕೊಳ್ಳಬಾರದು, ಇದು ಆ ಕಾರ್ಖಾನೆಯ ನಿಯಮ.

ಅಲ್ಲಿ ದುಡಿಯುವ ಮಹಿಳೆಯರು ವಿವಾಹ ಮಾಡಿಕೊಳ್ಳುತ್ತಾರೆ. ಆದರೆ ಅವರು ತಮ್ಮ ವಿವಾಹವನ್ನು ಗುಟ್ಟಾಗಿ ಇಡುವ ಪರಿಸ್ಥಿತಿ ಇದೆ. ಒಂದು ಪಕ್ಷ ಆಡಳಿತ ವರ್ಗಕ್ಕೆ ವಿವಾಹವಾದ ಸುದ್ದಿ ತಿಳಿದ ಕೂಡಲೇ ಆ ಮಹಿಳೆಯರನ್ನು ವಜಾ ಮಾಡಲಾಗುತ್ತದೆ. ಈ ವಿಚಿತ್ರ ಸಂಗತಿಯನ್ನು ಬಯಲುಮಾಡಿದ ವಿಮಲರಣದಿವೆ ಅವರು ನಾವೇನು 20ನೇ ಶತಮಾನದಲ್ಲಿ ಬದುಕುತ್ತಿರುವ ನಾಗರೀಕ ಪ್ರಜೆಗಳೊ ಅಥವಾ 10ನೇ ಶತಮಾನದ ಅನಾಗರೀಕ ಪಾಳೆಯಶಾಹಿ ಸಮಾಜದ ಪ್ರಜೆಗಳೊ ಎಂದು ಖಾರವಾಗಿ ಕೇಳಿದರು.

ಪಾರ್ಲಿಮೆಂಟ್ ಚಲೋ ಚಳುವಳಿ

ತಮ್ಮ ಸಂಘಟನೆಯ ಚಟುವಟಿಕೆಗಳನ್ನು ವಿವರವಾಗಿ ತಿಳಿಸಿದ ವಿಮಲ ರಣದಿವೆ ಮುಂಬರುವ ಐದಾರು ತಿಂಗಳಿನಲ್ಲಿ ತಮ್ಮ ಸಂಘಟನೆಯು ದುಡಿಯುವ ಮಹಿಳೆಯರ ಬೇಡಿಕೆಗಳ ಈಡೇರಿಕೆಗಾಗಿ "ಪಾರ್ಲಿಮೆಂಟ್ ಚಲೊ" ಚಳುವಳಿಯನ್ನು ವ್ಯವಸ್ಥೆ ಮಾಡುತ್ತಿದೆ ಎಂದು ಪ್ರಕಟಿಸಿದರು.

ದುಡಿಯುವ ಮಹಿಳೆಯರನ್ನು ಸುಡುತ್ತಿರುವ ಸಮಸ್ಯೆಗಳಾದ ವರದಕ್ಷಿಣೆ, ಸಾಮಾಜಿಕ ಅನ್ಯಾಯ, ದಿನನಿತ್ಯ ವಸ್ತುಗಳ ಅಭಾವದ ವಿರುದ್ಧ ಹೋರಾಡಲು ಸಂಘಟನೆಯನ್ನು ಶಕ್ತಿಶಾಲಿಯದನ್ನಾಗಿ ಬೆಳೆಸಿ ಎಂದು ಕರೆ ನೀಡಿದ ಅವರು ಸಂಘಟನೆಯ ಕರ್ನಾಟಕ ಘಟಕಕ್ಕೆ ಶುಭ ಹಾರೈಸಿದರು.

'ದುಡಿಯುವ ಮಹಿಳೆಯರ ಸಮನ್ವಯ ಸಮಿತಿ' ಕೇಂದ್ರ ಘಟಕದ ಸದಸ್ಯೆ ಕಾಂ. ಜಾನಮ್ಮ ಅಧ್ಯಕ್ಷತೆ ವಹಿಸಿದ್ದರು. ಕಾಂ. ರಾಜಮ್ಮ ಸ್ವಾಗತಿಸಿದರು. ಕಾಂ. ಆನ್ ವಂದಿಸಿದರು. ವಿಮಲ ರಣದಿವೆ ಅವರ ಇಂಗ್ಲೀಷ್ ಭಾಷಣವನ್ನು ಮಹಿಳಾ ಸಂಘಟನೆಯ ಕರ್ನಾಟಕ ರಾಜ್ಯ ಸಂಚಾಲಕಿ ಕಾಂ. ಎಸ್. ಮಾಲತಿ ಅವರು ಕನ್ನಡಕ್ಕೆ ಅನುವಾದಿಸಿದರು. ●

ಹತ್ತಿಗಿರಣಿ ಕಾರ್ಮಿಕರ ಹೋರಾಟಕ್ಕೆ ಸಿ. ಐ. ಟಿ. ಯು. ಬೆಂಬಲ

ಕರ್ನಾಟಕದ ಹತ್ತಿಗಿರಣಿ ಕಾರ್ಮಿಕರು ವೇತನದ ಹೆಚ್ಚಳಕ್ಕೆ-ತಮಗೂ ಸಹ ತಮಿಳುನಾಡಿನ ಹತ್ತಿಗಿರಣಿ ಕಾರ್ಮಿಕರಿಗೆ ಸಿಕ್ಕುತ್ತಿರುವಷ್ಟೇ ವೇತನ ಸಿಕ್ಕಬೇಕೆಂದು ಹೋರಾಡುತ್ತಿದ್ದಾರೆ.

ವೇತನದ ಪುನರ್ವಿಮರ್ಶೆಗೆ ನಮ್ಮ ರಾಜ್ಯದಲ್ಲಿ ಇರುವ ಮೂರು ಶ್ರೇಣಿಗಳನ್ನು ರದ್ದುಮಾಡಿ, ದೇಶದ ಇತರ ಜವಳಿ ಕೇಂದ್ರಗಳಲ್ಲಿ ಸಿಕ್ಕುತ್ತಿರುವಷ್ಟೇ ವೇತನ ಕರ್ನಾಟಕದ ಹತ್ತಿ ಗಿರಣಿ ಕಾರ್ಮಿಕರಿಗೂ ಸಿಕ್ಕುವಂತೆ ಮಾಡಲು ಕಾರ್ಮಿಕರ ಐಕ್ಯಹೋರಾಟವನ್ನು ಸಂಘಟಿಸಲು ಪ್ರಯತ್ನಿಸಬೇಕೆಂದು ರಾಜ್ಯದ ಹತ್ತಿಗಿರಣಿ ಉದ್ದಿಮೆಯಲ್ಲಿರುವ ಎಲ್ಲಾ ಕಾರ್ಮಿಕಸಂಘಗಳಿಗೆ ಸಿ. ಐ. ಟಿ. ಯು. ರಾಜ್ಯಸಮಿತಿಯು ಮನವಿ ಮಾಡುದೆತ್ತ. ●

ಇಂಡಾಲ್ ಕಾರ್ಮಿಕರ ಜಯ

ಸುಮಾರು ಒಂದೂವರೆ ಸಹಸ್ರ ಕಾರ್ಮಿಕರು ದುಡಿಯುವ "ಇಂಡಾಲ್" ಕಂಪೆನಿಯು ಕೆನಡಾದ ಬಹುರಾಷ್ಟ್ರೀಯ ಕಂಪೆನಿಗೆ ಸೇರಿದೆ. ಕಾರ್ಮಿಕ ಸಂಘಕ್ಕೆ ಕೆಲವು ತಿಂಗಳುಗಳ ಹಿಂದೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಸದಸ್ಯ ಮತ್ತು ಸಿ. ಐ. ಟಿ. ಯು. ಮುಂದಾಳು ಕಾಂ. ಆರ್. ಜಿ. ಸ್ಥಳೇಕರ್‌ರವರು ಉಪಾಧ್ಯಕ್ಷರಾಗಿ ಆಯ್ಕೆ ಆಗಿದ್ದರು. ಹಿಂದಿನ ಅಧ್ಯಕ್ಷರಾದ ರಾಮಅಪ್ಪೆ ಅವರು ಅಧ್ಯಕ್ಷರಾಗಿ ಮುಂದುವರಿದಿದ್ದರು. ಹಿಂದಿನ ಮುಖಂಡತ್ವವು ಮಾಲೀಕರೊಡನೆ ಒಪ್ಪಂದ ಮಾಡಿಕೊಂಡ ಪ್ರಕಾರ 1980 ಆಗಸ್ಟ್ ತನಕ ವೇತನ ಪುನರ್ವಿಮರ್ಶೆ ಮಾಡುವಂತಿದ್ದಿಲ್ಲ. ಬೆಲೆ ಏರಿಕೆಯಿಂದ ಜೀವನ ವೆಚ್ಚ ಹೆಚ್ಚಾದುದರಿಂದ, ಹಿಂದಿನ ಒಪ್ಪಂದವು ಏನೇ ಇದ್ದರೂ ಹೆಚ್ಚಿಗೆ ವೇತನ ಸಿಗಬೇಕೆಂದೂ, ಕಂಟ್ರಾಕ್ಟ್ ಕೆಲಸ ಪದ್ಧತಿ ರದ್ದಾಗಬೇಕೆಂದೂ ಬೇಡಿಕೆಗಳನ್ನು ಮುಂದಿಟ್ಟು ಹೋರಾಟ ನಡೆಸಬೇಕೆಂದು ಕಾಂ. ಸ್ಥಳೇಕರರು ಹೇಳಿದರು. ಈ ಅಭಿಪ್ರಾಯಕ್ಕೆ ಸರ್ವ ಸದಸ್ಯರ ಸಭೆಯಲ್ಲಿ ಸಂಪೂರ್ಣ ಬೆಂಬಲ ದೊರೆಯಿತು. ಇದನ್ನು ಅಧ್ಯಕ್ಷ ರಾಮಅಪ್ಪೆಯವರು ವಿರೋಧಿಸಿ ರಾಜೀನಾಮೆ ಇತ್ತರು. ಕಾಂ. ಸ್ಥಳೇಕರರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. ಜೂನಿನಿಂದ ಹೋರಾಟ ಪ್ರಾರಂಭವಾಯಿತು. ನಿದ್ರಿಸುತ್ತಿದ್ದ ಕಾರ್ಮಿಕರು ಒಗ್ಗಟ್ಟಿನಿಂದ ಹೋರಾಟದ ದಾರಿ ಹಿಡಿದರು.

ರಾಜ್ಯ ಲೇಬರ್ ಕಮಿಷನ್‌ರವರು ಮಾತುಕತೆ ನಡೆಸಿ, ಕಾರ್ಮಿಕ ಪ್ರತಿನಿಧಿ ಮತ್ತು ಮಾಲಕ ಪ್ರತಿನಿಧಿಗಳ ನಾಲ್ಕನೇ ಸುತ್ತಿನ ಮಾತುಕತೆಯಲ್ಲಿ ಒಪ್ಪಂದ ಮಾಡಲಾಯಿತು. ಈ ಒಪ್ಪಂದದ ಪ್ರಕಾರ ಕಂಟ್ರಾಕ್ಟ್ ಕೆಲಸಗಾರರಿಂದ ರೂ. 4-50 ದಿನಗೂಲಿಯ ಬದಲು 1-8-1979 ರಿಂದ ರೂ. 8-00 ರಂತೆಯೂ, 1-1-1980 ರಿಂದ ರೂ. 9-00 ರಂತೆಯೂ ದೊರೆಯುವುದು. ಕಂಟ್ರಾಕ್ಟ್ ಕೆಲಸಗಾರರಿಗೆ ಏಕಗಂಟಿನಲ್ಲಿ ವರ್ಷಕ್ಕೆ ರೂ. 400 ಬೋನಸ್ ರೀತಿಯಲ್ಲಿ ದೊರೆಯುವುದು. ಎಲ್ಲಾ ಖಾಯಂ ಕೆಲಸಗಾರರಿಗೆ ಶೇಕಡಾ 20 ಬೋನಸ್ಸು ಮತ್ತು ರೂ. 500 ಹೆಚ್ಚಿಗೆ (ಕಾನೂನು ಪ್ರಕಾರ ಶೇಕಡಾ 20 ಕ್ಕಿಂತ ಹೆಚ್ಚು ಬೋನಸ್ಸು ಕೊಡವುದು ಸಾಧ್ಯವಿಲ್ಲದಿರುವುದರಿಂದ) ಸಿಗುವುದು. ಕೆಲವು ಕೆಲಸಗಾರರ ಮೇಲಿದ್ದ 'ಸಸ್ಪೆಂಡ್ ಆರ್ಡರ್'ಗಳನ್ನು ಹಿಂತೆಗೆಯಲಾಗುವುದು. ಕಂಟ್ರಾಕ್ಟ್ ಪದ್ಧತಿಯನ್ನು ರದ್ದುಗೊಳಿಸುವ ಬಗ್ಗೆ ಪರಿಶೀಲಿಸಲು ತ್ರಿಪಕ್ಷೀಯ ಸಮಿತಿಯನ್ನು ಕೂಡಲೇ ರಚಿಸಲಾಗುವುದು.

ಹಿಂದಿನ ಒಪ್ಪಂದ ಇದ್ದರೂ, ಹೋರಾಟದ ಫಲವಾಗಿ ಕಾರ್ಮಿಕರಿಗೆ ಹಲವು ಬೇಡಿಕೆಗಳು ದೊರೆವಂತಾಗಿದೆ. ●

ಮೈಕೊ ಕಾರ್ಮಿಕರ ಮುಷ್ಕರ

ಮಾಲೀಕರಿಗೆ ಇಚ್ಛೆ ಬಂದಂತೆ ಕೆಲಸದ ಹೊರೆಯನ್ನು ಹೆಚ್ಚಿಸುವುದು, ಇ. ಎಸ್. ಐ. ನಿಧಿಯಲ್ಲಿ ರಜಾದಿವದ ಬಗ್ಗೆ ಕಡಿತ ಮಾಡುವುದು, ಸರದಿ ಪ್ರಕಾರ ವೈದ್ಯರುಗಳ ಸವಲತ್ತಿಲ್ಲದಿರುವುದು ಮತ್ತು ಇತರ ಬೇಡಿಕೆಗಳನ್ನು ಮುಂದಿಟ್ಟು ಮೈಕೊ ಕಾರ್ಮಿಕರು ರಾಷ್ಟ್ರದಾದ್ಯಂತ ಸೆಪ್ಟೆಂಬರ್ ಒಂದರಂದು ಒಂದು ದಿನದ ಸಾಂಕೇತಿಕ ಮುಷ್ಕರ ನಡೆಸಿದರು. ನಗರದ ಕಾರಖಾನೆಯಲ್ಲಿ ಸುಮಾರು 7000 ಕಾರ್ಮಿಕರಿದ್ದು, ಅಂದು ಯಾರೂ ಕೆಲಸಕ್ಕೆ ಹೋಗಲಿಲ್ಲ. ಕಾರ್ಮಿಕರ ಒಗ್ಗಟ್ಟನ್ನು ಮುರಿಯಲು ಈಗ ಮಾಲೀಕರು ಕೆಲಸಗಾರರ ಮುಖಂಡರುಗಳನ್ನು ಕೆಲಸದಿಂದ ಅಮಾನತುಗೊಳಿಸುವುದು ಮೊದಲಾದ ಕ್ರಮಗಳಿಗೆ ಮೊದಲು ಮಾಡಿರುವರು. ಈಗಾಗಲೇ 15 ಮಂದಿಯನ್ನು ಅಮಾನತುಗೊಳಿಸಿರುವರು. ○

ಹತ್ತಿಗಿರಣಿಕಾರ್ಮಿಕರ ಮುಷ್ಕರ

ತಮ್ಮ ಬೇಡಿಕೆಗಳನ್ನು ಈಡೇರಿಸಲು ಮಾತುಕತೆಗೆ ಒತ್ತಾಯಿಸಿ ರಾಜ್ಯದ ಸುಮಾರು 26000 ಹತ್ತಿಗಿರಣಿ ಕಾರ್ಮಿಕರು ಸೆಪ್ಟೆಂಬರ್ ಒಂದರಂದು ಒಂದು ದಿನದ ಯಶಸ್ವಿ ಮುಷ್ಕರ ಹೂಡಿದರು. ರಾಜ್ಯದ ಚರಿತ್ರೆಯಲ್ಲಿ ಇದೊಂದು ಹೊಸ ಅಧ್ಯಾಯ. ಬೆಂಗಳೂರಿನಲ್ಲಿ ಅಂದು ಬೆಳಿಗ್ಗೆ ಮಿನರ್ವ ಮಿಲ್ಲಿನ ವಠಾರದಲ್ಲಿ ಸೇರಿದ್ದ ಬೃಹತ್ ಸಭೆಯನ್ನುದ್ದೇಶಿಸಿ ಸಿ. ಐ. ಟಿ. ಯು. ಮುಖಂಡ ಕಾಂ. ವಿ. ಜೆ. ಕೆ. ನಾಯರ್‌ರವರೂ, ಎ. ಐ. ಟಿ. ಯು. ಸಿ. ಮುಖಂಡ ಮುನಿರತ್ನಂ ಮತ್ತಿತರರು ಮಾತನಾಡಿದರು. ಬೇಡಿಕೆಗಳು ಈಡೇರದಿದ್ದಲ್ಲಿ ರಾಜ್ಯದಾದ್ಯಂತ ಅನಿರ್ಧಿಷ್ಟ ಮುಷ್ಕರ ಹೂಡಲು ಮುಂದಾಗಲು ಕಾರ್ಮಿಕರಿಗೆ ಕರೆ ಇತ್ತರು. ●

ಬಂಡವಾಳಶಾಹಿ ಜಗತ್ತಿನಲ್ಲೂ ಬಿಕ್ಕಟ್ಟು: ಹೆಚ್ಚಾಗುತ್ತಿರುವ ಮುಷ್ಕರಗಳು ಮತ್ತು ಹೋರಾಟದ ಹೊಸವಿಧಾನಗಳು

1979ರ ಮೊದಲ ಕೆಲವು ತಿಂಗಳುಗಳಲ್ಲಿ ಬಂಡವಾಳಶಾಹಿ ಜಗತ್ತು ತೀವ್ರ ವರ್ಗ ಹೋರಾಟವನ್ನು ಕಂಡಿದೆ.

ವರ್ಷದ ಆರಂಭದ ಕೆಲವು ದಿನಗಳಲ್ಲಿಯೇ ಇಂಗ್ಲೆಂಡಿನಲ್ಲಿ ಲಾರಿ ಡ್ರೈವರ್‌ಗಳು, ಪೆಟ್ರೋಲ್ ಟ್ಯಾಂಕರ್ ಮತ್ತು ರೈಲ್ವೆ ಕಾರ್ಮಿಕರು ಮುಂತಾದವರನ್ನು ಒಳಗೊಂಡಂತೆ 100,000 ಕಾರ್ಮಿಕರ ಹೋರಾಟ ನಡೆಯಿತು. ಮತ್ತು ಏಪ್ರಿಲ್‌ನಲ್ಲಿ ಸುಮಾರು 5ಲಕ್ಷ ಸಿವಿಲ್ ಕಾರ್ಮಿಕರು ರಾಷ್ಟ್ರೀಯ ಮುಷ್ಕರವೊಂದನ್ನು ಹೂಡಿದ್ದರು.

ಇಟಲಿಯಲ್ಲಿ ಯುನೈಟೆಡ್ ಟ್ರೇಡ್ ಯೂನಿಯನ್ ಫೆಡರೇಷನ್ ಕರೆ ಕೊಟ್ಟಿದ್ದ “ಹೋರಾಟದ ರಾಷ್ಟ್ರೀಯ ದಿನ”ದಂದು ಸುಮಾರು 80 ಲಕ್ಷ ಕಾರ್ಮಿಕರು ಸರ್ಕಾರ ತನ್ನ ಆರ್ಥಿಕ ಕಾರ್ಯಕ್ರಮವನ್ನು ಬದಲಿಸಬೇಕೆಂದು ಒತ್ತಾಯ ಮಾಡಿದರು. ಜೊತೆಗೆ, ಏಪ್ರಿಲ್ ಶುರುವಾತಿನಲ್ಲಿ 400,000 ಮೋಟಾರು ಸಾರಿಗೆ ಕಾರ್ಮಿಕರು ಸಂಪು ಹೂಡಿದರು.

ಜನವರಿಯಲ್ಲಿ 260,000 ಬ್ಯಾಂಕ್ ಕಾರ್ಮಿಕರ ದೊಡ್ಡ ಮುಷ್ಕರ ಫ್ರಾನ್ಸ್‌ನಲ್ಲಿ ನಡೆಯಿತು. ಬ್ಯಾಂಕ್ ನೌಕರರ ಅತಿ ದೊಡ್ಡ ಮುಷ್ಕರವಿದು.

ಬಂಡವಾಳಶಾಹಿ ಪದ್ಧತಿಯ ತೀವ್ರ ಕೆಡುಕುಗಳೆಲ್ಲಾ ಆರ್ಥಿಕ ಬಿಕ್ಕಟ್ಟಿನಿಂದಾಗಿ ಉಲ್ಬಣಗೊಂಡಿವೆ. ನಿರುದ್ಯೋಗ ವೇಗವಾಗಿ ಏರುತ್ತಿದೆ, ಜೀವನವೆಚ್ಚ ಹೆಚ್ಚಾಗುತ್ತಿದೆ ಮತ್ತು ಶಾಂತಿ ಕಾಲದಲ್ಲಿ ಹಿಂದೆಂದೂ ಇಲ್ಲದಷ್ಟು ಕರಭಾರ ಹೆಚ್ಚಾಗಿದೆ. ಈ ಆರ್ಥಿಕ ಸಮಸ್ಯೆಯ ಹೊರೆಯನ್ನು ಜನರ ಮೇಲೆ ಹೇರುವ ಉದ್ದೇಶದಿಂದ ಆಳುವ ವರ್ಗದವರು ದುಡಿಯುವ ಜನರ ಆರ್ಥಿಕ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಸಿದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇದೆಲ್ಲದರ ಒಟ್ಟು ಪರಿಣಾಮ: ಕೋಟ್ಯಾಂತರ ದುಡಿಯುವ ಜನರು ಬಂಡವಾಳಶಾಹಿಗಳ ವಿರುದ್ಧ ಮಾತ್ರವಲ್ಲ, ಇಡೀ ಬೂರ್ಜ್ವಾ ರಾಜ್ಯಶಕ್ತಿಯ ವಿರುದ್ಧವೇ ಹೋರಾಟಕ್ಕಿಳಿದಿದ್ದಾರೆ.

5 ಕೋಟಿ ಜನ ಮುಷ್ಕರಗಳಲ್ಲಿ :

ವರ್ಲ್ಡ್ ಟ್ರೇಡ್ ಯೂನಿಯನ್ ಫೆಡರೇಶನ್ನಿನ ಪ್ರಕಾರ ಕಳೆದ ವರ್ಷ ಸುಮಾರು 5 ಕೋಟಿ ಜನರು ಮುಷ್ಕರಗಳಲ್ಲಿ ಭಾಗವಹಿಸಿದ್ದರು.

ಸ್ಥೂಲ ಅಂದಾಜಿನ ಪ್ರಕಾರ, ಕಳೆದ ವರ್ಷ ಅಮೇರಿಕಾದಲ್ಲಿ 17 ಲಕ್ಷ ಜನರು 500 ಮುಷ್ಕರಗಳಲ್ಲಿ ಭಾಗವಹಿಸಿದ್ದರು. ಇದರಿಂದ ಹತ್ತಿರಹತ್ತಿರ 4 ಕೋಟಿ “ಶ್ರಮ ದಿನ”ಗಳು ನಷ್ಟವಾಗಿವೆ.

ಕಳೆದ ವರ್ಷದ ಹನ್ನೊಂದೇ ತಿಂಗಳಿನಲ್ಲಿ ಫ್ರಾನ್ಸ್‌ನಲ್ಲಿ 3000 ಮುಷ್ಕರಗಳಾಗಿದ್ದವೆಂದು ಅಲ್ಲಿಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಟ್ಯಾಟಿಸ್ಟಿಕ್ಸ್ ತಿಳಿಸಿದೆ.

ಇಂಗ್ಲೆಂಡಿನಲ್ಲಿ 2349 ಮುಷ್ಕರಗಳಾದವು. ಸುಮಾರು 10 ಲಕ್ಷ ಕಾರ್ಮಿಕರನ್ನು ಒಳಗೊಂಡಿದ್ದ ಈ ಮುಷ್ಕರಗಳಿಂದಾಗಿ 93 ಲಕ್ಷ “ಶ್ರಮ ದಿನಗಳು” ನಷ್ಟವಾದವು.

ಕಳೆದ ವರ್ಷದ ಮುಷ್ಕರಗಳ ಒಂದು ಸಾಮಾನ್ಯ ಲಕ್ಷಣವೆಂದರೆ ಅವುಗಳಲ್ಲಿ ಬಹಳಷ್ಟು ರಾಷ್ಟ್ರೀಯ ಮಟ್ಟದ ಹೋರಾಟಗಳಾಗಿದ್ದವು. ಕೆಲವು ಉದಾಹರಣೆಗಳು :

1978ರ ಆರಂಭದಲ್ಲಿ ಅಮೇರಿಕಾದ 180,000 ಗಣಿಕಾರ್ಮಿಕರು 110 ದಿನ ಮುಷ್ಕರ ಮಾಡಿದರು. ಜೊತೆಗೆ, 330,000 ರೈಲ್ವೆ ಕಾರ್ಮಿಕರು ಜುಲೈ ಮತ್ತು ಸೆಪ್ಟೆಂಬರ್‌ನಲ್ಲಿ ಹೋರಾಟ ಮಾಡಿದ್ದರಿಂದ ಇಡೀ ದೇಶದ ಸರಕು ಸಾಗಾಣಿಕೆ ನಿಂತು ಹೋಗಿತ್ತು. ಸರ್ಕಾರ ಕಾರ್ಮಿಕ ವಿರೋಧಿ ಶಾಸನ ತರಲು ಬೆದರಿಕೆ ಹಾಕಿದರೂ ಈ ಎರಡೂ ಹೋರಾಟಗಳು ಯಶಸ್ವಿಯಾದವು.

ಕೆನಡಾದ ಇಂಟರ್‌ನ್ಯಾಷನಲ್ ನಿಕ್ಕಲ್ ಕಂಪನಿಯ 12,000 ಕಾರ್ಮಿಕರು ಉತ್ತಮವಾಗಿ ಸಂಘಟಿಸಲಾಗಿದ್ದ ಮುಷ್ಕರವೊಂದನ್ನು ಮಾಡಿದರು. ಇದರ ಜೊತೆಯಲ್ಲಿ 23 ಸಾವಿರ ಪೋಸ್ಟಲ್ ನೌಕರರು ಹತ್ತು ದಿವಸ ಕೆಲಸ ಮಾಡದೆ ಹೋರಾಟ ಮಾಡಿದರು. ಈ ಎರಡು ಹೋರಾಟಗಳು ರಾಷ್ಟ್ರೀಯ ಮತ್ತು ವಿಭಾಗೀಯ ಘೋಷಣೆಗಳನ್ನು ಮೀರಿ ನಡೆದವು. ಒಂದು ತರಹ ಇತರ ಕಾರ್ಮಿಕರಿಗೆ ಮಾದರಿಯಾಗಿದ್ದವು. ವರ್ಗ ಬೆಂಬಲದ ಭಾವನೆಯನ್ನು ಉಂಟುಮಾಡಿದವು. ಸರ್ಕಾರ ಎಲ್ಲ ಥರದ ದಮನಕಾರಿ ನೀತಿಯನ್ನು ಅನುಸರಿಸಿದರೂ, ಅದು ಕಾರ್ಮಿಕರ ಒಗ್ಗಟ್ಟಿನ ಹೋರಾಟದಿಂದಾಗಿ ಹಿಂದೆ ಸರಿಯುವಂತಾಯಿತು.

ಯುರೋಪಿನಾದ್ಯಂತ ವರ್ಗ ಹೋರಾಟ:

ಇಷ್ಟೇ ವ್ಯಾಪಕ ಹೋರಾಟಗಳು ಪಶ್ಚಿಮ ಯುರೋಪಿನಲ್ಲೂ ನಡೆದಿವೆ.

1978ರ ಆರಂಭದಲ್ಲಿ ಬ್ರಿಟನ್ನಿನ ಅಗ್ನಿಶಾಮಕ ದಳದ ಕಾರ್ಮಿಕರು ಎರಡು ತಿಂಗಳು ಚಳುವಳಿ ಮಾಡಿದರು. ಪೋಸ್ಟಲ್ ಕಾರ್ಮಿಕರು ಬೇಸಿಗೆಯಲ್ಲಿ ರಾಷ್ಟ್ರೀಯ ಹೋರಾಟ ಮಾಡಬೇಕೆಂದು ಕರೆಕೊಟ್ಟರು. ಇದರೊಂದಿಗೆ 57000 ಫೋರ್ಡ್ ಕಾರ್ಮಿಕರು ಸೆಪ್ಟೆಂಬರ್‌ನಲ್ಲಿ ಕೆಲಸ ನಿಲ್ಲಿಸಿ ಮುಷ್ಕರ ಮಾಡಿದರು.

ಫ್ರಾನ್ಸಿನಲ್ಲಿ ಬಂದರು ಕಾರ್ಮಿಕರು ಸಂಪು ಹೂಡಿದ ಪರಿಣಾಮ ಎರಡು ತಿಂಗಳು ಅನೇಕ ಬಂದರುಗಳು ಸ್ಥಗಿತಗೊಂಡಿದ್ದವು. ಇದೇ ತರದ ಇನ್ನೊಂದು ಹೋರಾಟ ಮಿಲಿಟರಿ ಕೈಗಾರಿಕೆಗಳಲ್ಲಿ 170,000 ಕಾರ್ಮಿಕರ ಮುಷ್ಕರ.

1978 ರಲ್ಲಿ ಪಶ್ಚಿಮ ಜರ್ಮನಿಯ ಸಾವಿರಾರು ಬಂದರು ಕಾರ್ಮಿಕರು ಮತ್ತು ಪ್ರೆಸ್ ಕಾರ್ಮಿಕರು ಹೋರಾಟ ಮಾಡಿದರು. ಇದರ ಜೊತೆಗೆ, ಬೇಸಿಗೆಯಲ್ಲಿ ಸ್ಟೀಲ್ ಫ್ಯಾಕ್ಟರಿಗಳಲ್ಲೂ ಮುಷ್ಕರಗಳಾದವು. ಈ ಥರದ ಹೋರಾಟವನ್ನು ಈ ದೇಶ ಕಳೆದ ಎರಡು ದಶಕಗಳಿಂದ ಕಂಡೇ ಇರಲಿಲ್ಲ.

ಹಿಂದಿನ ಕೆಲವು ವರ್ಷಗಳ ಪರಿಪಾಠದಂತೆ, ಕಳೆದ ವರ್ಷವೂ ಜಪಾನಿನಲ್ಲಿ ಬೇಸಿಗೆಯ ವರ್ಗ ಹೋರಾಟಗಳಾದವು. ಈ ಹೋರಾಟಗಳು ದೇಶಾದ್ಯಂತ ಆಗುವಂತೆ ಜಪಾನಿ ಟ್ರೇಡ್ ಯೂನಿಯನ್‌ಗಳು ಶ್ರಮಿಸುತ್ತಲೇ ಬಂದಿವೆ.

ಹೋರಾಟದ ಹೊಸ ವಿಧಾನ :

ಹಳೆಯ, ‘ಸಾಂಪ್ರದಾಯಿಕ’ ಹೋರಾಟದ ವಿಧಾನಗಳ ಜೊತೆಗೆ ಈಗ ಹೊಸ ವಿಧಾನಗಳೂ ಬಂದಿವೆ. ಇದಕ್ಕೆ ಬಂಡವಾಳಶಾಹಿ ಸಮಾಜದಲ್ಲಾಗಿರುವ ಆರ್ಥಿಕ-ಸಾಮಾಜಿಕ ಬದಲಾವಣೆಗಳೇ ಕಾರಣ. ತಾಂತ್ರಿಕ ಮುನ್ನಡೆ, ಆಧುನಿಕ ಉತ್ಪಾದನಾ ಕ್ರಮಗಳಿಂದ ಸಾಧ್ಯವಾಗಿರುವ ಪರಿಣತೆ ಮತ್ತು ಸಹಕಾರದಿಂದ, ಮ್ಯಾನೇಜ್‌ಮೆಂಟಿನ ಮೇಲೆ ಒತ್ತಾಯ ಹೇರಲು (ಹೆಚ್ಚೆಚ್ಚು ಜನರನ್ನು ಹೋರಾಟದಲ್ಲಿ ತೊಡಗಿಸುವುದರ ಜೊತೆಗೆ) ತುಂಬಾ ಮುಖ್ಯವಾದ ಕೆಲವು ತಾಂತ್ರಿಕ ವಿಭಾಗದ ಕಾರ್ಮಿಕರು ಕೆಲಸ ನಿಲ್ಲಿಸುವ ಮೂಲಕ ಕೂಡ ಸಾಧ್ಯವಾಗಿದೆ. ಇದನ್ನು “ಪುನರಾವರ್ತಿಸುವುದು” ಅಥವಾ “ಇಟಾಲಿಯನ್” ಮುಷ್ಕರಗಳೆನ್ನುತ್ತಾರೆ.

ಹೋರಾಟದ ಇತರ ವಿಧಾನಗಳೆಂದರೆ, ಕೆಲಸವನ್ನು ಪೂರ ನಿಲ್ಲಿಸುವ ಬದಲು ನಿಧಾನ ಮಾಡುವುದು; ಅಂಥ ಒಂದು ವಿಧಾನವಾದ “ವರ್ಕ್ ಟು ರೂಲ್” ಫ್ರಾನ್ಸ್, ಅಮೇರಿಕ, ಇಟಲಿ ಮತ್ತು ಜಪಾನಿನಲ್ಲಿ ವ್ಯಾಪಕವಾಗಿದೆ. ಕೆನಡಾದಲ್ಲಿ “ಸ್ಟಡಿ ಸೆಷನ್” ಎಂಬ ವಿಧಾನದಲ್ಲಿ ಕಾರ್ಮಿಕರ ಒಂದು ವಿಭಾಗವು ಎಲ್ಲಾ ಕಾರ್ಮಿಕರೂ ಸಭೆಯನ್ನು ಮಾಡುವಂತೆ ಒತ್ತಾಯ ಮಾಡುತ್ತದೆ.

“ವರ್ಕ್ ಇನ್” ಎಂಬುದು ಹೋರಾಟದ ಇನ್ನೊಂದು ಹೊಸ ವಿಧಾನ. ಮುಚ್ಚಲಿರುವ ಕಾರ್ಖಾನೆಯನ್ನು ಕಾರ್ಮಿಕರು ವಶಪಡಿಸಿಕೊಂಡು ಕೆಲಸಮಾಡಿ, ಉತ್ಪನ್ನದ ಮಾರಾಟವನ್ನೂ ನೋಡಿಕೊಳ್ಳುತ್ತಾರೆ. ಕಳೆದ ವರ್ಷ ಜಪಾನೊಂದರಲ್ಲೇ ಅಂತಹ 100 ಹೋರಾಟಗಳಾದವು. ಫ್ರಾನ್ಸಿನಲ್ಲಿ ರಸ್ತೆಹಾಕುವ ಕೆಲಸಕ್ಕೆ ಬಳಸುವ ವಸ್ತುಗಳನ್ನು ತಯಾರಿಸುವ ಬೋರ್ಡಿಯಕ್ ಸ.ದ್, ಪ್ಯಾರಿಸಿಯನ್ ಲಿಬರ್ ಎಂಬ ಮುದ್ರಣ ಉದ್ಯಮ ಹಾಗೂ ಸೆಂಟ್ ಜೋಸೆಫ್‌ನಲ್ಲಿ ಬಟ್ಟೆ ಫ್ಯಾಕ್ಟರಿಯೊಂದರಲ್ಲಿ ಈ ಥರದ ಹೋರಾಟವಾಗಿತ್ತು. ಮೊದಲ ಎರಡು ಹೋರಾಟಗಳಲ್ಲಿ ಇದು ಎರಡು ವರ್ಷ ನಡೆಯಿತು ಮತ್ತು ಮೂರನೆಯದರಲ್ಲಿ ಅನೇಕ ತಿಂಗಳುಗಳು ನಡೆಯಿತು. ಸಾಮಾನ್ಯವಾಗಿ ಈ ಹೋರಾಟಗಳಿಗೆ ಉತ್ತಮ ಪ್ರಚಾರ ಸಿಗುತ್ತದೆ. ಏಕೆಂದರೆ ಇದು ಕಾರ್ಮಿಕರು ಮ್ಯಾನೇಜ್‌ಮೆಂಟಿನ ಸಮಸ್ಯೆಗಳನ್ನು ಎತ್ತಿಕೊಳ್ಳುವ ಪ್ರಸಂಗ. ಇಂಥ ಹೋರಾಟಗಳಾದಾಗ ಇಡೀ ದೇಶವೇ ಆಸಕ್ತಿಯಿಂದ ಗಮನಿಸುತ್ತದೆ.

ನೌಕರಿ, ಸಂಬಳ ಮತ್ತು ದುಡಿಮೆಯ ಸ್ವರೂಪ ಇವು ವರ್ಗ ಹೋರಾಟಗಳ ಮುಖ್ಯ ಕಾಳಜಿಗಳು. ಪಶ್ಚಿಮ ಯೂರೋಪಿನ ಕಾಮನ್ ಮಾರ್ಕೆಟ್ (ಇ.ಇ.ಸಿ.) ದೇಶಗಳಲ್ಲಿ ಕೆಲಸವೇ ಸಿಗದಂತಹ ಪರಿಸ್ಥಿತಿಯಿಂದಾಗಿ, ‘ಉದ್ಯೋಗಕ್ಕಾಗಿ ಹೋರಾಟದ ಯೂರೋಪಿಯನ್ ದಿನವನ್ನು’ ಯೂರೋಪಿಯನ್ ಕಾಂಫೆಡರೇಷನ್ ಆಫ್ ಟ್ರೇಡ್ ಯೂನಿಯನ್ ಏಪ್ರಿಲ್ 5, 1978ರಂದು ಆಚರಿಸಿತು.

ನಿರುದ್ಯೋಗ ಸಮಸ್ಯೆ :

ಶಾಲೆಬಿಟ್ಟವರಿಗೆ ಕೆಲಸ ಸಿಗಬೇಕು ಎಂಬುದು ಮುಖ್ಯ ಬೇಡಿಕೆಗಳಲ್ಲೊಂದು. ಇಟಲಿಯಲ್ಲಿ 17 ಮತ್ತು 24 ವರ್ಷಗಳ ನಡುವಿನ ವಯಸ್ಸಿನವರು ಸುಮಾರು 15 ಲಕ್ಷ ಮಂದಿ ನಿರುದ್ಯೋಗಿಗಳಾಗಿದ್ದರು.

ಇನ್ನೊಂದು ಮುಖ್ಯ ಬೇಡಿಕೆಯೆಂದರೆ, ಸಂಬಳ ಕಡಿಮೆ ಮಾಡದೆ ಕೆಲಸದ ಅವಧಿಯನ್ನು ಕಡಿಮೆ ಮಾಡಿ ಎಂಬುದು. ಹೀಗೆ ಮಾಡಿದರೆ, ಹೆಚ್ಚು ಜನರಿಗೆ ಕೆಲಸ ಕೊಡಲು ಸಾಧ್ಯ.

ಪಶ್ಚಿಮ ಜರ್ಮನಿಯಲ್ಲಿ ಹೋರಾಟಗಳು ತೀವ್ರವಾಗಿವೆ. ಸ್ಟೀಲ್ ಮತ್ತು ಪ್ರಿಂಟಿಂಗ್ ಕಾರ್ಮಿಕರು ತಮ್ಮ ಕೆಲಸ ಉಳಿಸಿಕೊಳ್ಳಲು ತಿಂಗಳುಗಟ್ಟಲೆ ಹೋರಾಡಿದರು. ಈ ಉದ್ಯಮಗಳಲ್ಲಿ ಹೊಸ ತಾಂತ್ರಿಕ ಪ್ರಗತಿ ಮತ್ತು ಉತ್ಪಾದನೆಯನ್ನು “ಸರಿಗಟ್ಟಿದ್ದರಿಂದ” ಕಾರ್ಮಿಕರ ಇಡೀ ವಿಭಾಗಗಳನ್ನೇ ವಜಾಮಾಡಲಾಗಿತ್ತು. ಕಾರ್ಮಿಕರ ಹೋರಾಟದ ಒತ್ತಡದಿಂದಾಗಿ, ಮಾಲೀಕರು ಅನೇಕ ರಿಯಾಯ್ತಿಗಳನ್ನು ಕೊಡಬೇಕಾಯಿತು.

ಬಂಡವಾಳಶಾಹಿ ಜಗತ್ತಿನಲ್ಲಾಗುತ್ತಿರುವ ಹೋರಾಟಗಳು ಹೆಚ್ಚೆಚ್ಚು ಉಗ್ರವಾಗುತ್ತಿವೆ. ಕೆಲವು ಸುಧಾರಣಾವಾದಿಗಳು ವರ್ಗಹೋರಾಟ ಬೇಡ, ಹೇಗೋ ಒಪ್ಪಂದ ಮಾಡಿಕೊಂಡು ಹೋಗೋಣ ಎಂದು ಹೇಳುತ್ತಿದ್ದರೂ ಇಡೀ ಬಂಡವಾಳಶಾಹಿ ಜಗತ್ತಿನಲ್ಲಿ ವರ್ಗಹೋರಾಟಗಳು ಹೆಚ್ಚಾಗುತ್ತಲೇ ಇವೆ. ●

ತಲಘಟ್ಟಪುರದಲ್ಲಿ ಬಹಿರಂಗ ಸಭೆ

ಬೆಂಗಳೂರು ದಕ್ಷಿಣ ತಾಲ್ಲೂಕು ಎಸ್ಟೇಟ್ ಮತ್ತು ಫಾರಂ ಕೆಲಸಗಾರರ ಸಂಘದ ಆಶ್ರಯದಲ್ಲಿ, ತಾತಗುಣಿ ಎಸ್ಟೇಟ್ ಹರಿಜನ ಹೋರಾಟಕ್ಕೆ ರೈತ, ಕಾರ್ಮಿಕರ ಬೆಂಬಲ ಕೋರಲು 29-8-79ರಂದು ತಲಘಟ್ಟಪುರದಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ತಲಘಟ್ಟಪುರ ಗ್ರೂಪ್ ಪಂಚಾಯ್ತಿ ಅಧ್ಯಕ್ಷರಾದ ಶ್ರೀ ಎಚ್. ಮುನಿರಾಮಯ್ಯ ಅವರು ವಹಿಸಿದ್ದರು. ಸಭೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯಸಮಿತಿಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್, ಕರ್ನಾಟಕ ರಾಜ್ಯ ಸಿ. ಐ. ಟಿ. ಯು ಅಧ್ಯಕ್ಷರಾದ ಕಾಂ. ಎಸ್. ಸೂರ್ಯನಾರಾಯಣ ರಾವ್, ರಾಜ್ಯ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸಂಚಾಲಕಿ ಕಾಂ.ಎಸ್. ಮಾಲತಿ ಇವರು ಭಾಗವಹಿಸಿದ್ದರು. ಕಾಂ. ಪಿ. ಜಗನ್ನಾಥ್ ಅವರು ತಾತಗುಣಿ ಎಸ್ಟೇಟ್ ಮಾಲೀಕರ ಕಾರ್ಮಿಕ ವಿರೋಧಿ ನೀತಿಯನ್ನು ವಿವರಿಸಿದರು. ಈ ಹರಿಜನ ಕಾರ್ಮಿಕರ ಹೋರಾಟ 42ನೇ ದಿನಕ್ಕೆ ಕಾಲಿಟ್ಟಿದೆ ಎಂದು ಹೇಳಿದರು.

ಕಾಂ. ಎಂ. ಕೆ. ಭಟ್ ಅವರು ಹೋರಾಟದ ದಮನ ಮಾಡಲು ಬಂಡವಾಳಶಾಹಿಗಳು ಪ್ರಯತ್ನ ಮಾಡುವುದರ ಬಗ್ಗೆ ಎಚ್ಚರಿಸಿ, ಕೆಲಸಗಾರರು ರಾಜಕೀಯವಾಗಿ ಹೆಚ್ಚು ಸಂಘಟಿತರಾಗಲು ಕರೆ ಕೊಟ್ಟರು. ಹೋರಾಟಕ್ಕೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಎಲ್ಲ ರೀತಿಯ ಬೆಂಬಲ ಕೊಡುವುದಾಗಿ ಅವರು ತಿಳಿಸಿದರು. ದುಡಿಯುವವರಿಗೆ ದುಡಿಮೆಯ ಪ್ರತಿಫಲ ಸಿಗಬೇಕಾದರೆ ಹೋರಾಟವೊಂದೇ ದಾರಿ ಎಂದು ತಿಳಿಸಿದ ಎಸ್. ಮಾಲತಿಯವರು ಈ ಹೋರಾಟಕ್ಕೆ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಬೆಂಬಲ ಇದೆ ಎಂದು ಹೇಳಿದರು. ಕೊನೆಯಲ್ಲಿ ಕಾಂ. ಎಸ್. ಸೂರ್ಯನಾರಾಯಣ ರಾವ್ ಅವರು ಮಾತನಾಡಿ, ತಾತಗುಣಿ ಎಸ್ಟೇಟ್ ಮಾಲೀಕರ ಪಿತೂರಿಯನ್ನು ಖಂಡಿಸಿದರು. ○

ಹುಚ್ಚು ಪ್ರಚಾರಗಳು

ಜನತಾ ನಾಯಕರ ನಿರಾಶೆಯು ಅವರು ಅಧ್ಯಕ್ಷ ಸಂಜೀವರೆಡ್ಡಿಯವರ ವಿರುದ್ಧ ನಡೆಸಿದ ಮರುಳು ಪ್ರಚಾರದಲ್ಲಿ ವ್ಯಕ್ತವಾದ ಹಾಗೆ ಇನ್ನೆಲ್ಲೂ ಕಾಣಿಸಿಕೊಂಡಿರಲಿಲ್ಲ. ಆರನೇ ಲೋಕಸಭೆಯನ್ನು ವಿಸರ್ಜಿಸಿ, ಏಳನೇ ಲೋಕಸಭೆಯು ಮಧ್ಯಕಾಲೀನ ಚುನಾವಣೆಯ ಮೂಲಕ ರಚನೆಯಾಗುವಂತೆ ಅವರು ಮಾಡಿರುವ ಆಜ್ಞೆಯು ಸಂವಿಧಾನದ ಚೇತನವನ್ನು ಉಲ್ಲಂಘನೆಯಾಗಿದೆ ಎಂದು ಅವರು ಆಪಾದಿಸಿದ್ದಾರೆ.

ರಾಷ್ಟ್ರಪತಿ ಆಜ್ಞೆಯ ಘೋಷಣೆಯಾದ ಕೆಲವೇ ನಿಮಿಷಗಳಲ್ಲೇ, ಅವರು ಕೈಗೊಂಡ ಈ "ಸಂವಿಧಾನ ವಿರೋಧಿ"ಯಾದ ಕ್ರಮಕ್ಕಾಗಿ ಅವರನ್ನು ಸಂಸತ್ತಿನ ಮುಂದೆ ಮಹಾಭಿಯೋಗ (impeachment)ಕ್ಕೊಳಗಾಗುವಂತೆ ಮಾಡುವುದಾಗಿ ಜನತಾ ಅಧ್ಯಕ್ಷ ಚಂದ್ರಶೇಖರ್ ಘೋಷಿಸಿದರು. ಪಕ್ಷದ ಅಧ್ಯಕ್ಷರು ಈ ಹೇಳಿಕೆ ಕೊಟ್ಟ ನಂತರ, ಅವರ ಪಕ್ಷವು ಈ ಮಹಾಭಿಯೋಗಕ್ಕೆ ಸಿದ್ಧತೆ ನಡೆಸಲು ಕಾನೂನು ತಜ್ಞರ ಒಂದು ಸಮಿತಿಯನ್ನು ರಚಿಸುವ ನಿರ್ಧಾರವೂ ಹೊರಬಂದಿತು.

ಅವರ ದುರಾದೃಷ್ಟಕ್ಕೆ, ಅವರ ಪಕ್ಷದ ಹಿರಿಯನಾಯಕರಲ್ಲೊಬ್ಬರಾದ ಡಾ. ಸುಬ್ರಮಣಿಯಂ ಸ್ವಾಮಿಯವರು, ಈ ನಿಲುವಿಗೆ ತಮ್ಮ ಅಸಮ್ಮತಿ ಇದೆ ಎಂದು ಬಹಿರಂಗವಾಗಿ ಘೋಷಿಸಿದರು. ತಮ್ಮ ಪಕ್ಷದ ಅಧ್ಯಕ್ಷರಿಗೆ ಬದಲಾಗಿ ಡಾ. ಸ್ವಾಮಿಯವರಿಗೇ ಸಮ್ಮತಿ ಸೂಚಿಸುವ ಅನೇಕ ನಾಯಕರು ಜನತಾಪಕ್ಷದಲ್ಲೇ ಇದ್ದಾರೆಂಬುದು ಸ್ಪಷ್ಟವಾಯಿತು. ಇದೆಲ್ಲಕ್ಕೂ ಮಿಗಿಲಾಗಿ, ಅಧ್ಯಕ್ಷ ಚಂದ್ರಶೇಖರ್ ಅವರು ಮಹಾಭಿಯೋಗಕ್ಕೆ ಸಿದ್ಧತೆ ನಡೆಸಲು ನೇಮಿಸಿದ ಕಾನೂನುತಜ್ಞರಲ್ಲೊಬ್ಬರಾದ ರಾಮ್‌ಜೇಠ್‌ಮಲಾನಿಯವರೇ ಇದು "ಬುದ್ಧಿಹೀನ" ಕ್ರಮ ಎಂದು ಬಹಿರಂಗ ಹೇಳಿಕೆ ಕೊಟ್ಟರು. ಮಹಾಭಿಯೋಗ ಕ್ರಮವನ್ನು ಕೈಬಿಡುವಂತೆ ಸಮಿತಿಯು ಪಕ್ಷಕ್ಕೆ ಸಲಹೆ ಮಾಡುವುದಾಗಿ ಜೇಠ್‌ಮಲಾನಿಯವರೇ ಸ್ಪಷ್ಟಪಡಿಸಿದರು.

ಮಹಾಭಿಯೋಗವನ್ನು ನಡೆಸಲು ಸಾಧ್ಯವಿಲ್ಲ ಎಂಬ ಕಾರಣದಿಂದಲೇ ಅದೊಂದು ವಿಫಲಕ್ರಮ ಎಂಬುದನ್ನು ಯಾವುದೇ ಬುದ್ಧಿವಂತ ವ್ಯಕ್ತಿ ತಿಳಿದುಕೊಳ್ಳಬಹುದು. ಅಂಥ ಕ್ರಮಕ್ಕೆ ಸಂಸತ್ತಿನ ಉಭಯಸದನಗಳಲ್ಲೂ ಮೂರನೇ ಎರಡು ಬಹುಮತಬೇಕು. ಸದ್ಯದ ರಾಜ್ಯಸಭೆಯಲ್ಲಿ ಜನತಾಪಕ್ಷಕ್ಕೆ ಬಹುಮತ ಇಲ್ಲ. ಏಳನೇ ಲೋಕಸಭೆ ರಚನೆಯಾದಾಗ ಅದರಲ್ಲಿ ಬಹುಮತ ಇರುತ್ತದೆ ಎಂದೂ ನಿರೀಕ್ಷಿಸುವಂತಿಲ್ಲ. ವಾಸ್ತವತೆಯ ಪ್ರಜ್ಞೆ ಇರುವ ಯಾರಾದರೂ ಈ ಕ್ರಮವನ್ನು ಯೋಚಿಸುತ್ತಿರಲಿಲ್ಲ.

ಆರೋಪಗಳಲ್ಲಿ ಹುರುಳಿದೆಯೋ?

ಈ ಕಾನೂನು ವಿಚಾರಗಳಿರಲಿ, ರಾಷ್ಟ್ರಪತಿಯವರ ಕ್ರಮವನ್ನು ಅದರ ಗುಣಮೌಲ್ಯಗಳಿಂದ ವಿರೋಧಿಸಬಹುದೆ? ಚಂದ್ರಶೇಖರ್ ಮತ್ತು ಅವರ ಸಹೋದ್ಯೋಗಿಗಳು ಮಾಡುತ್ತಿರುವಂತೆ ಅವರನ್ನು "ಸರ್ವಾಧಿಕಾರಿ" ಎಂದು ಕರೆದು, "ಪಿತೂರಿ" ನಡೆಸಿದ್ದಾರೆಂದು ಆಪಾದನೆ ಮಾಡುವುದಿರಲಿ, ರಾಷ್ಟ್ರಪತಿ ಸಂಜೀವರೆಡ್ಡಿಯವರು ಸಂವಿಧಾನದ ವಿಧಾನಗಳನ್ನು ಮೀರಿದ್ದಾರೆ ಎಂದು ಹೇಳುವುದಕ್ಕೆ ಸರಿಯಾದ ಕಾರಣಗಳು ಇವೆಯೆ?

ರಾಷ್ಟ್ರಪತಿಯವರು ವಿಮರ್ಶೆಗೆ ಮೀರಿದವರು ಎಂಬ ಸಿದ್ಧಾಂತವನ್ನು ವಿಪರೀತ ಬೆಂಬಲಿಸುತ್ತಿದ್ದ ಜನರೇ ಈಗ ರಾಷ್ಟ್ರಪತಿಯವರ ವಿರುದ್ಧ ಸಂಯಮರಹಿತ ಆಪಾದನೆಗಳನ್ನು ಮಾಡುತ್ತಿದ್ದಾರೆ ಎಂಬುದನ್ನು ಮೊದಲಿಗೆ ಗಮನಿಸೋಣ. ಅದೇ ವೇಳೆಗೆ, ಸಂವಿಧಾನದ ಪ್ರಕಾರ ರಾಷ್ಟ್ರಪತಿಯವರಿಗೆ ನೀಡಲಾಗಿದೆ ಎಂದು ಹೇಳಲಾದ ವಿಸ್ತೃತ ಮತ್ತು ತಪ್ಪು ವಿವರಣೆಗೊಳಗಾದ ಅಧಿಕಾರಗಳು ಮತ್ತು ಸವಲತ್ತುಗಳಿಂದ, ಅನೇಕರು ಅಧ್ಯಕ್ಷಕೇಂದ್ರವಾದ ಸರ್ಕಾರವನ್ನು ತರಬೇಕೆಂಬ ಬೇಡಿಕೆಯನ್ನೂ ಮುಂದಿಡುತ್ತಿದ್ದಾರೆ.

ಆಡಳಿತಪಕ್ಷವು ಬಹುಮತ ಕಳೆದುಕೊಂಡಿರುವುದು ಮತ್ತು ಸರಿಯಾದ ಪ್ರಾಮಾಣಿಕ ದಾರಿಯಲ್ಲಿ ಬಹುಮತ ಬೆಂಬಲ ಪಡೆಯಲಾರದಂಥ ಸ್ಥಿತಿಯಲ್ಲಿ ಇನ್ನಾವುದೇ ಪಕ್ಷ ಇಲ್ಲದಿರುವುದು, ಇವೆರಡರಿಂದ ಅಧ್ಯಕ್ಷಕೇಂದ್ರ ಸರ್ಕಾರ ಬರಬೇಕೆಂದು ಅದರ ಪರವಾದ ಜನ ಕೇಳುತ್ತಿದ್ದಾರೆ. ನಮ್ಮ ಗಣರಾಜ್ಯ ಸಂವಿಧಾನದಲ್ಲಿ ರಾಜ್ಯದ ಮುಖ್ಯಸ್ಥ ಅಧಿಕಾರವು ಸರ್ವಾಧಿಕಾರದ ಅಸ್ತ್ರವಾಗಿ ಪರಿವರ್ತನೆಯಾಗುವುದನ್ನು ತಡೆಯುವುದರಲ್ಲಿ ಆಸಕ್ತರಾದವರು, ತಮ್ಮ ಹಕ್ಕುಗಳ ಪ್ರಕಾರ, ಹಾಗೆ ನೋಡಿದರೆ ತಮ್ಮ ಕರ್ತವ್ಯದ ಪ್ರಕಾರ, 1979ರ ಜುಲೈನಲ್ಲಿ ಸಂಭವಿಸಿದ ಸರ್ಕಾರಿ ಬಿಕ್ಕಟ್ಟಿನಲ್ಲಿ ಅತ್ಯುಚ್ಚ ಅಧಿಕಾರಸ್ಥನು ಹೇಗೆ ವರ್ತಿಸುತ್ತಾನೆ ಎಂಬುದರ ಬಗ್ಗೆ ವಿಪರೀತ ಎಚ್ಚರವನ್ನು ವಹಿಸಿದ್ದಾರೆ.

ಆದರೆ ಪ್ರಶ್ನೆ ಇಷ್ಟೇ: ಅತ್ಯುಚ್ಚ ಅಧಿಕಾರದಲ್ಲಿರುವ ಸಂಜೀವರೆಡ್ಡಿಯವರು, ಜನತಾ ನಾಯಕರು ಆಪಾದಿಸಿರುವ ಹಾಗೆ ಬೇಕಾಬಿಟ್ಟಿಯಾಗಿ ನಡೆದುಕೊಂಡರೆ?

ಇದು ಸಂವಿಧಾನದ ವಿಧಾನಗಳ ಸಂಕುಚಿತ ವಿವರಣೆಯ ಪ್ರಶ್ನೆ ಅಲ್ಲ. ಅಲ್ಲಿ ಸಂಭವಿಸಿದ ಬಿಕ್ಕಟ್ಟಿನ ರಾಜಕೀಯ ಗುಣವಿಮರ್ಶೆಯ ಪ್ರಶ್ನೆ. ಏಕೆಂದರೆ, ಸಂಸತ್ತಿನಲ್ಲಿ ವಿಪರೀತ ಬಹುಮತ ಪಡೆದು ಮತ್ತು ಜನತೆಯ ಬಹುಸಂಖ್ಯೆಯ ಬೆಂಬಲ ಪಡೆದು ಅಧಿಕಾರ ಪಡೆದ ಸರ್ಕಾರವೊಂದು, ಜನತೆಯ ಹಾಗೂ ಸಂಸತ್ತಿನ ಬೆಂಬಲ ಕಳೆದುಕೊಂಡಾಗ ರಾಷ್ಟ್ರಪತಿ ಏನು ಮಾಡಬೇಕು ಎಂಬುದರ ಬಗ್ಗೆ ವಿಶದವಾಗಿ ರೂಪಿತವಾಗಿರುವ ನಮ್ಮ ಸಂವಿಧಾನ ಏನನ್ನೂ ಹೇಳುವುದಿಲ್ಲ. ಮೊರಾರ್ಜಿದೇಸಾಯರ ನೇತೃತ್ವದ ಜನತಾಸರ್ಕಾರ ಹೀಗೆ ಇತ್ತು.

ಜನತಾಪಕ್ಷವು ಸಂಸತ್ತಿನಲ್ಲಿ ಬಹುಮತ ಕಳೆದುಕೊಂಡಿದೆ ಎಂಬುದನ್ನು ಆಗಿನ ಪ್ರಧಾನ ಮಂತ್ರಿಯಾಗಿದ್ದ ಮೊರಾರ್ಜಿ ದೇಸಾಯರೇ ಜುಲೈ 15ರಂದು ತಮ್ಮ ಮಂತ್ರಿಮಂಡಲದ ರಾಜೀನಾಮೆ ಕೊಟ್ಟಾಗ ಒಪ್ಪಿಕೊಂಡಿದ್ದಾರೆ. ಈ ಬಹುಮತ ಕಳೆದುಕೊಂಡದನ್ನು ಒಪ್ಪಿಕೊಂಡ ಮೇಲೆ, ಅವರ ಪಕ್ಷದ ಸಹೋದ್ಯೋಗಿಗಳ ಸಲಹೆಯ ಮೇರೆಗೆ ಅವರಿಗೆ ಉಳಿದದ್ದು ವಿರೋಧಪಕ್ಷವಾಗಿ ಕುಳಿತುಕೊಳ್ಳುವ ಗಾಂಭೀರ್ಯ ತೋರಿಸುವುದು ಅಥವಾ ಸಂಸತ್ತನ್ನು ವಿಸರ್ಜಿಸಿ ಹೊಸ ಚುನಾವಣೆ ನಡೆಸುವಂತೆ ರಾಷ್ಟ್ರಪತಿಯವರಿಗೆ ಸಲಹೆ ಮಾಡುವುದು.

ಅವರನ್ನು ಯಾವುದನ್ನೂ ಮಾಡಲಿಲ್ಲ; ಜನತಾ ಪಕ್ಷದ ನಾಯಕಸ್ಥಾನದಲ್ಲಿ ಅವರೇ ಮುಂದುವರೆದರು. (ಅನೇಕ ಸಹೋದ್ಯೋಗಿಗಳು ಸಲಹೆ ಮಾಡಿದರೂ ಆ ಸ್ಥಾನವನ್ನು ಬಿಟ್ಟುಕೊಡಲು ಅವರು ಒಪ್ಪಲಿಲ್ಲ) ಅಲ್ಲದೆ ಇನ್ನೊಂದು ಸರ್ಕಾರವನ್ನು ರಚಿಸುವ ತಮ್ಮ ಹಕ್ಕನ್ನೂ ಮುಂದಿಟ್ಟರು. ಹೀಗೆ ತಮ್ಮ ಹಕ್ಕನ್ನು ಮುಂದಿಡುವಾಗ, ಅವರು ತಮ್ಮೊಡನೆ ಸಹಮತವಿಲ್ಲದ ಜನರನ್ನೂ ತಮ್ಮ ಬೆಂಬಲಿಗರು ಎಂದು ಪಟ್ಟಿಯಲ್ಲಿ ಸೇರಿಸಿದರು. ನಂತರ ಇದು "ತಪ್ಪು" ಎಂದು ಅವರೇ ಒಪ್ಪಿಕೊಂಡು, ಇದರ ಪ್ರಾಯಶ್ಚಿತ್ತಕ್ಕಾಗಿ ಲೋಕಸಭೆಗೆ ರಾಜೀನಾಮೆ ನೀಡುವ ಆಶಯವನ್ನು ವ್ಯಕ್ತಪಡಿಸಿದರು. ಹೊಸ ಸರ್ಕಾರವನ್ನು ರಚಿಸಲು ಅವರಿಗಿರುವ ಹಕ್ಕನ್ನು ರಾಷ್ಟ್ರಪತಿಯವರು ಸರಿಯಾಗಿಯೇ ತಳ್ಳಿಹಾಕಿದರು.

ಈ ಕೊನೆಯ ಘಟ್ಟದಲ್ಲಿ ದೇಸಾಯಿ ಅವರು ಪಕ್ಷದ ನಾಯಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ನಂತರ ಅವರ ಉಪದೇಶ ಮತ್ತು ಸಲಹೆಯ ಮೇರೆಗೆ ಅವರ ಪಕ್ಷವು ಹೊಸ ನಾಯಕನನ್ನು ಚುನಾಯಿಸಿತು (ಜಗಜೀವನ್ ರಾಮ್). ಹೊಸ ನಾಯಕರು ಸರ್ಕಾರ ರಚಿಸಲು ತಮಗೆ ಅವಕಾಶ ನೀಡಬೇಕೆಂಬ ಮನವಿಯನ್ನು ಮುಂದಿಟ್ಟರು. ಅವರಿಗೆ ಈ ಅವಕಾಶ ನೀಡಲಿಲ್ಲ ಎಂಬುದೇ ಈಗ ಬಂದಿರುವ ದೂರು.

ಮೂರನೆಯ ಅವಕಾಶ ಬೇಕಂತೆ

ಜಗಜೀವನರಾಮ್ ಅವರು ಕೇಳುತ್ತಿರುವುದು ಅವರ ಪಕ್ಷಕ್ಕೆ ಮೂರನೇ "ಅವಕಾಶ"ವನ್ನು ಎಂಬುದನ್ನು ಒಂದು ಕ್ಷಣ ಒತ್ತಟ್ಟಿಗಿಡೋಣ. ಮೊದಲನೆಯದು, ಲೋಕಸಭೆಯಲ್ಲಿ ಚವಾಣರು ಮಂಡಿಸಲಿದ್ದ ಅವಿಶ್ವಾಸ ನಿರ್ಣಯವನ್ನು ಸೋಲಿಸುವುದು. ಎರಡನೆಯದು ಮೊದಲಿನ ಆಡಳಿತ ಪಕ್ಷದ ವಿಫಲನಾಯಕ (ಮೊರಾರ್ಜಿ ದೇಸಾಯಿ)ರಿಗೆ ಲೋಕಸಭೆಯಲ್ಲಿ ತಮಗಿನ್ನೂ ಬೆಂಬಲ ಇದೆ ಎಂಬುದನ್ನು ರುಜುವಾತುಪಡಿಸಲು ನೀಡಿದ ಅವಕಾಶ. ಮೊದಲನೆಯ ಎರಡು ಅವಕಾಶಗಳನ್ನು ಬಳಸಿಕೊಳ್ಳಲು ವಿಫಲವಾದ ಪಕ್ಷದ ನಾಯಕರು, ಮತ್ತೆ ಮೂರನೇ ಅವಕಾಶವನ್ನು ಹೇಗೆ ಕೇಳುತ್ತಾರೆ?

ಆದರೆ, ತಮ್ಮನ್ನು ಬೆಂಬಲಿಸುವ ರಾಜಕೀಯ ಪಕ್ಷಗಳ ಪಟ್ಟಿ ನೀಡುವಂತೆ ಮೊದಲಿನ ಆಡಳಿತಪಕ್ಷದ ಹೊಸ ನಾಯಕರನ್ನು ಕೇಳಿದ ರಾಷ್ಟ್ರಪತಿ ರೆಡ್ಡಿಯವರು ಅವರಿಗೆ ಈ ಅವಕಾಶವನ್ನೂ ಕೊಟ್ಟಿದ್ದಾರೆ. ಆದರೆ ಅವರು ಅಂಥ ಪಟ್ಟಿಯನ್ನೇನೂ ಸಲ್ಲಿಸಲಿಲ್ಲ. ಅದರ ಬದಲು, ಪ್ರತಿಯೊಂದು ಬೇರೆ ಪಕ್ಷವು ತಮ್ಮನ್ನು ವಿರೋಧಿಸಿ, ಬೆಂಬಲ ನೀಡಲು ನಿರಾಕರಿಸಿದರೂ ಸಹ, ಎಲ್ಲ ಪಕ್ಷಗಳಿಗಿಂತ ತಮಗೆ ಬಹುಸಂಖ್ಯೆಯಲ್ಲಿ ವೈಯಕ್ತಿಕ ಸದಸ್ಯರ ಬೆಂಬಲ ಸಿಗುವುದೆಂದು ಜಗಜೀವನರಾಮ್ ಬಹಿರಂಗವಾಗಿ ಹೇಳಿಕೊಂಡರು.

ಈ ಪಕ್ಷ ಮತ್ತು ಅದರ ನಾಯಕರೇ, "ಪಕ್ಷಾಂತರಗಳು" ಮತ್ತು "ಪಕ್ಷಾಂತರಿಗಳ" ವಿರುದ್ಧ ಉಗ್ರ ಹೋರಾಟ ನಡೆಸುತ್ತಿದೆಯೆಂಬುದನ್ನು ನೆನೆಸಿಕೊಳ್ಳೋಣ. ಜನತಾ (ಎಸ್)ನ ವಿರುದ್ಧ ಇರುವ ಮುಖ್ಯ ಆಪಾದನೆ ಎಂದರೆ ಅದು "ಪಕ್ಷಾಂತರಿಗಳ ಪಕ್ಷ" ಎನ್ನುವುದು. ಜನತಾ (ಎಸ್) ಬಗ್ಗೆ ಈ ಆಪಾದನೆ ಮಾಡುವ ನಾಯಕರಿಗೇ, ಎಲ್ಲ ಪಕ್ಷಗಳನ್ನು ಧಿಕ್ಕರಿಸುವ ಮತ್ತು ಅಸಮ್ಮತಿ ಸೂಚಿಸುವ ವೈಯಕ್ತಿಕ ಸದಸ್ಯರ ಬೆಂಬಲ ಪಡೆದು ಹೊಸ ಸರ್ಕಾರ ರಚಿಸುವ ಹಕ್ಕನ್ನು ಸಾಧಿಸುವ ಅರ್ಹತೆ ಇಲ್ಲ. "ಪಕ್ಷಾಂತರಗಳು" ಮತ್ತು "ಪಕ್ಷಾಂತರಿಗಳ" ವಿರುದ್ಧ ಪ್ರಚಾರ ನಡೆಸುವುದನ್ನು, ಅಧಿಕಾರದಾಹ ಈ ಕೆಳಮಟ್ಟಕ್ಕೆ ಇಳಿಸಿದೆ.

ಜನತಾ ಪಕ್ಷವನ್ನು ಬಿಟ್ಟರೆ ಲೋಕಸಭೆಯಲ್ಲಿರುವ ಎಲ್ಲ ರಾಜಕೀಯ ಪಕ್ಷಗಳೂ ಜುಲೈ ಮಧ್ಯದಲ್ಲಿ ಸಂಭವಿಸಿದ ಸರ್ಕಾರಿ ಬಿಕ್ಕಟ್ಟಿಗೆ ಹೊಸ ಚುನಾವಣೆಯೊಂದೆ ಪರಿಹಾರ ಎಂಬ ನಿರ್ಧಾರಕ್ಕೆ ಬಂದಿವೆ ಎಂಬುದನ್ನು ಈ ಸಂದರ್ಭದಲ್ಲಿ ಗಮನಿಸಬೇಕು. ಲೋಕಸಭೆಯ ಎಲ್ಲ ಪ್ರಮುಖ ಪಕ್ಷಗಳಿಗೂ— "ಪ್ರಮುಖ ರಾಜಕೀಯ ಪಕ್ಷ" ಎಂದರೆ ಐವತ್ತಕ್ಕಿಂತಲೂ ಹೆಚ್ಚು ಸದಸ್ಯರನ್ನುಳ್ಳ ಪ್ರತಿ ಪಕ್ಷಕ್ಕೂ ಒಂದೊಂದು ಅವಕಾಶವನ್ನು ನೀಡಲಾಗಿದೆ. (ಜನತಾಗೆ ಮೂರು ಅವಕಾಶಗಳನ್ನು ಕೊಡಲಾಗಿದೆ.) ಮಿಕ್ಕ ಪಕ್ಷಗಳನ್ನು ಸಭಾಪತಿಯವರು "ಗುಂಪುಗಳು" ಎಂದು ಗಣಿಸುತ್ತಾರೆಯೇ ವಿನಾ "ಪಕ್ಷಗಳು" ಎಂದಲ್ಲ. ಈ ಅವಕಾಶ ನೀಡಿಕೆಗೆ ಇರುವ ಒಂದೇ ಅಪವಾದವೆಂದರೆ, ಸರ್ಕಾರ ರಚಿಸಲು ತನ್ನ ಹಕ್ಕು ಮುಂದಿಡದಿದ್ದ ಕಾಂಗ್ರೆಸ್ (ಐ) ಪಕ್ಷ. ವಿರೋಧ ಪಕ್ಷದ ಆಗಿನ ನಾಯಕ ಚವಾಣ್, ಜನತಾದ ದೇಸಾಯಿ, ಜನತಾ (ಎಸ್) ನ ಚರಣ್‌ಸಿಂಗ್ ಮೂವರಿಗೂ ಅವಕಾಶಗಳನ್ನು ಕೊಟ್ಟರೂ ಅವರು ವಿಫಲರಾದರು. ಈ ಪರಿಸ್ಥಿತಿಯಲ್ಲಿಯೇ ಜನತಾ ಬಿಟ್ಟು ಉಳಿದ ಪಕ್ಷಗಳು ಮತ್ತು ಗುಂಪುಗಳು ಮಧ್ಯಕಾಲೀನ ಚುನಾವಣೆ ನಡೆಸುವಂತೆ ರಾಷ್ಟ್ರಪತಿಯವರಿಗೆ ಮನವಿ ಮಾಡಿದ್ದು.

ನಂತರ ಇನ್ನೊಂದು ಪ್ರಶ್ನೆ ಎದ್ದಿತು: ಚುನಾವಣೆ ಮುಗಿಯುವವರೆಗೆ ಉಸ್ತುವಾರಿ ಸರ್ಕಾರದ ಆಡಳಿತವನ್ನು ನೋಡಿಕೊಳ್ಳುವವರುಯಾರು? ಚುನಾವಣೆ ಮುಗಿಯುವವರೆಗೆ ಸರ್ವ ಪಕ್ಷಗಳ ಅಥವಾ ರಾಷ್ಟ್ರೀಯ ಸರ್ಕಾರವೊಂದನ್ನು ಮಾಡಬೇಕೆಂದು ಸಲಹೆಗಳನ್ನು ನೀಡಲಾಗಿತ್ತು. ರಾಷ್ಟ್ರಪತಿಯವರಿಗೇ ಕೆಲವು ಕಾಲ ಈ ಆಲೋಚನೆಯಿದ್ದಂತೆ ಕಾಣುತ್ತಿತ್ತು. ಆದರೆ ಕೊನೆಗೆ ಇದನ್ನು ಕೈಬಿಡಲಾಯಿತು. ಇದನ್ನು ರಾಷ್ಟ್ರಪತಿಯವರ ಬೇಕಾಬಿಟ್ಟಿ ಕೆಲಸ ಎಂದು ಕರೆಯಲಾಗುತ್ತದೆಯೆ?

ಚರಣ್‌ಸಿಂಗ್ ಸರ್ಕಾರವು ಉಸ್ತುವಾರಿ ಸರ್ಕಾರವಾಗಿ ಮುಂದುವರೆಯಬಾರದು ಎಂಬ ವಿಚಾರಕ್ಕೆ ಜನತಾ ನಾಯಕರೊಡನೆ ಕಾಂಗ್ರೆಸ್ (ಐ) ಗೆ ಸಂಪೂರ್ಣ ಸಮ್ಮತಿ ಇದ್ದಂತೆ ಕಾಣುತ್ತದೆ. ಆದರೆ ಚರಣ್‌ಸಿಂಗ್ ಅವರು ಮೊದಲು ಪ್ರಧಾನ ಮಂತ್ರಿ ಆದಾಗ ಇದೇ ಕಾಂಗ್ರೆಸ್ (ಐ) ನಾಯಕರೇ ಅವರಿಗೆ "ಕರಾರುಗಳಿಲ್ಲದ ಬೆಂಬಲ" ನೀಡಿದ್ದರೆಂಬುದನ್ನು ಗಮನಿಸಬೇಕು. ಬೆಂಬಲ ನಿಲ್ಲಿಸಿ ವಿರೋಧಿಸಲು ಅವರು ತಮ್ಮದೇ ಆದಕಾರಣಗಳನ್ನು ಹೊಂದಿರಬಹುದು ಆದರೆ ಅವರು ತಮ್ಮ ನಿಲವು ಬದಲಾಯಿಸಿದಾಗ ರಾಷ್ಟ್ರಪತಿಯವರೂ ಬದಲಾಯಿಸಬೇಕೆಂದು ನಿರೀಕ್ಷಿಸುವುದು ಸರಿಯೆ? ಇದರಿಂದ ನಿಷ್ಪಕ್ಷಪಾತ ರಾಜ್ಯಮುಖ್ಯಸ್ಥನೊಬ್ಬನು ಒಂದು ರಾಜಕೀಯ ಪಕ್ಷದ ಉಪಕರಣವಾದಂತಾಗುವುದಿಲ್ಲವೆ?

ಚರಣ್‌ಸಿಂಗ್ ಪಕ್ಷಪಾತಿಗಳು ನಾವಲ್ಲ

ನಾವು ಚರಣ್‌ಸಿಂಗ್ ಸರ್ಕಾರದ ಪಕ್ಷಪಾತಿಗಳೇನೂ ಅಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇವೆ. ಸಂಸತ್ತಿನ ಪ್ರಮುಖ ರಾಜಕೀಯ ಪಕ್ಷಗಳೆಲ್ಲಕ್ಕೂ ಒಪ್ಪಿತವಾದ ಬೇರೆ ಉಸ್ತುವಾರಿ ಸರ್ಕಾರ ಬಂದರೆ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಅಂಥ ರೀತಿಯ ಒಪ್ಪಿಗೆಯೇನೂ ಇಲ್ಲದಿರುವಾಗ, ರಾಷ್ಟ್ರಪತಿಯವರು ಒಂದು ಬಗೆಯ ಉಸ್ತುವಾರಿ ಸರ್ಕಾರವನ್ನು ಎಲ್ಲ ರಾಜಕೀಯ ಪಕ್ಷಗಳು ಮತ್ತು

[5ನೇ ಪುಟ ನೋಡಿ]

ಕ್ರಾಂತಿಯ ಅಂತರಂಗ ಮರ್ಮರ

—ದೊರಾನ

ನಾನು ಬರೆಯಲು ಹೊರಟದ್ದು ನಮ್ಮ ದೇಶದ ನಾಗರೀಕ ಸ್ವಾತಂತ್ರ್ಯ ಮತ್ತು ಪ್ರಜಾ ಸತ್ತಾತ್ಮಕ ಹಕ್ಕುಗಳನ್ನು ಕುರಿತು, ಅವುಗಳ ಕಗ್ಗೊಲೆಗಳನ್ನು ಕುರಿತು. ಬರೆಯುವ ಹೊತ್ತಿಗೆ ನೆನಪಿನಾಳದಿಂದ ಒಬ್ಬ ವ್ಯಕ್ತಿ ಬಂದು ಎದುರಿಗೆ ನಿಂತಿದ್ದಾನೆ. ರಕ್ತದಿಂದ ತೊಯ್ದು ಹೋಗಿರುವಂತೆ ಕಾಣುತ್ತಿದೆ. ಹಕ್ಕುಗಳ ತಾತ್ವಿಕ ಚರ್ಚೆಗಿಂತ ರಕ್ತ ಮಾಂಸದ, ಅಖಂಡ ಧೈರ್ಯದ, ಮಡುಗಟ್ಟಿ ನಿಂತ ನೋವಿನ ಈ ತೆಲಂಗಾಣದ ಯೋಧ ಆಳವಾಗಿ ಕಾಡುತ್ತಿದ್ದಾನೆ. ನಿರಂಜನರ 'ಮೈನಾಭವನದ ಮಲ್ಲಯ್ಯ' ಎಂಬ ಕಥೆಯ ನಾಯಕ ನೀತ. ಚರಿತ್ರೆಯ ಕ್ರೌರ್ಯದ ವಿರುದ್ಧ ಬಂಡಾಯವೆದ್ದ ಈ ಧೀರ ಬರುವುದನ್ನು ಬೇಡವೆನ್ನಲಾರೆ.

1970 ರ ಚಳಿಗಾಲದ ಒಂದು ರಾತ್ರಿ. ಗುಂತಕಲ್ ಮೆಯಿಲ್‌ನಲ್ಲಿ ಊರಿಗೆ ವಾಪಸಾಗುತ್ತಿದ್ದೆ. ಎಲ್ಲಿ ಕಾಲಿಟ್ಟರೂ ಇನ್ನೊಬ್ಬರ ತಲೆ ಮೇಲೊ, ಹೊಟ್ಟೆಮೇಲೊ ಇಟ್ಟೆವೋ ಎಂದು ಗಾಬರಿಯಾಗುವಷ್ಟು ಜನ. ಚಾಪೆ ಸುರುಳಿಯಂತಿದ್ದ ನನ್ನನ್ನು ಸ್ನೇಹಿತರು ಸುಲಭವಾಗಿ ಒಳಕ್ಕೆ ಎಳೆದುಕೊಂಡರು. ನಿತ್ಯ ಪ್ರಯಾಣದ ಸಂಗಾತಿಗಳು ಅವರು. ಮೂಳೆಗಳನ್ನು ಮುಟ್ಟುತ್ತಿದ್ದ ಚಳಿಯ ರಾತ್ರಿ. ಹೊರಗೆ ಚಳಿಯ ಧಗೆ, ಒಳಗೆ ಸಾವಿರ ಸಿಗರೇಟ ಹೊಗೆ. ಗೆಳೆಯರೆಲ್ಲಾ ಇಸ್ಪೀಟಾಡುತ್ತಿದ್ದರು.

ಓಕಳಿಪುರದ ಸ್ಲಮ್ಮುಗಳ ದುರ್ಗಂಧ, ಮಿನರ್ವಾಮಿಲ್ಲಿನ ಹೊಲೆಗಳ ನಡುವೆ ರೈಲು ಹೋಗುತ್ತಿದ್ದ ಹಾಗೆ ನಿಧಾನಕ್ಕೆ ನಿರಂಜನರ 'ವಾರದ ಹುಡುಗ' ಕಥಾ ಸಂಕಲನವನ್ನು ಕೈಗೆತ್ತಿಕೊಂಡೆ. ಕಾಲೇಜು ನಾಲ್ಕಕ್ಕೇ ಮುಗಿದಿದ್ದರೂ ರಾತ್ರಿ ಹತ್ತರ ತನಕ ಅಲೆದಿದ್ದರ ಸುಸ್ತು, ಬಳಲಿಕೆ, ಹಸಿವು, ಕಣ್ಣೆಳೆಯುತ್ತಿತ್ತು. 'ಮೈನಾಭವನದ ಮಲ್ಲಯ್ಯ' ಮನಸ್ಸಿನೊಳಗೆ ನಡೆದದ್ದು ಆಗ.

ಲೇಖಕರ ಹೋಟೆಲಾದ ಮೈನಾ ಭವನಕ್ಕೆ ಮಾಲಿಎಂಬ ಹೊಸ ಕೆಲಸಗಾರ ಬಂದಿದ್ದಾನೆ. ದೈತ್ಯಾಕಾರಿ. ಯಾರೊಡನೆಯೂ ಹೆಚ್ಚು ಮಾತಿಲ್ಲ. ಕನ್ನಡ, ತಮಿಳು ಯಾವುದೂ ಬರದ ಈತ ಉತ್ತರದ ಕಡೆಯವನಂತೆ. ನೋಡಿದರೆ ಕುತೂಹಲ ಹುಟ್ಟಿಸುವ ವ್ಯಕ್ತಿ. ಒಂದು ದಿನ ರಾತ್ರಿ ಅವನೇ ಲೇಖಕರ ರೂಮಿಗೆ ಬಂದ. ಬಂದವನೇ ರೂಮಿನ ಗೋಡೆಗಳ ಮೇಲಿದ್ದ ಕ್ರಾಂತಿಕಾರರ ಫೋಟೋಗಳತ್ತ ಕಣ್ಣಾಡಿಸಿದ. ನಂತರ ಮಾಲಿ ಹೇಳಿದ: ನಾನು ತೆಲಂಗಾಣದವನು. ಇಬ್ಬರಿಗೂ ಎಲ್ಲ ಅರ್ಥವಾಯಿತು. ತೆಲಂಗಾಣ ಹೋರಾಟವನ್ನು ದಮನ ಮಾಡುತ್ತಿದ್ದ ಕಾಲ ಅದು. ಕಮ್ಯುನಿಸ್ಟರಾಗಿದ್ದ ಲೇಖಕರಿಗೆ ಬಿಡಿಸಿ ಹೇಳಬೇಕಾಗಿರಲಿಲ್ಲ. ಮಾಲಿ ಉರುಫ್ ಮಲ್ಲಯ್ಯ ಒಬ್ಬ ಭೂಗತ ಕ್ರಾಂತಿಕಾರಿ.

ಮಲ್ಲಯ್ಯ ತೆಲಂಗಾಣ ಸಶಸ್ತ್ರ ಹೋರಾಟದ ಒಬ್ಬ ರೈತ ಮುಖಂಡ. ದೊಡ್ಡ ಹೋರಾಟಗಳನ್ನು ನಡೆಸಿದ್ದ, ತೆಲುಗು ಮಾತ್ರ ಬಲ್ಲ, ಧೀರ; ಹೋರಾಟದ ಹಿಂಜರಿದ ನಂತರ ಗಾಯಗೊಂಡಿದ್ದ ಮಲ್ಲಯ್ಯ ಚಿಕಿತ್ಸೆಗೆಂದು ಬೆಂಗಳೂರಿಗೆ ಬಂದ. ನಂತರ ಏಕೊ ಊರಿನ ಸಂಪರ್ಕ ಕಡಿದು ಹೋಯಿತು. ಕೈಲಿ ಕಾಸಿಲ್ಲ. 'ಮೈನಾ ಭವನ'ದಲ್ಲಿ ಕೆಲಸಗಾರನಾದ.

ಕ್ರಾಂತಿಯ ಬೆಂಕಿ ಹೃದಯದಲ್ಲಿ ಉರಿಯುತ್ತಲೇ ಇತ್ತು. ನರನರದಲ್ಲಿ ತೆಲಂಗಾಣ. ತನ್ನೂರಿನ ಬಗ್ಗೆ, ಹೋರಾಟದ ಬಗ್ಗೆ ತೆಲುಗು ಪತ್ರಿಕೆ, ಪುಸ್ತಕಗಳನ್ನೂ ಲೇಖಕರಿಂದ ತರಿಸಿ ಓದಿದ. ಊರಿನ ಯಾವುದೋ ವಕೀಲರ ವಿಳಾಸಕ್ಕೆ ಪತ್ರ ಬರೆಸಿದ. ಹೇಗೋ ಸಂಪರ್ಕ ಬೆಳೆಸಿದ. ಅಲ್ಲಿಂದ ಉತ್ತರ ಬಂತು; ಇಂಥ ನಿರ್ದಿಷ್ಟ ದಿನ ಬಂದು ಕರೆದೊಯ್ಯುತ್ತೇವೆ. ಮತ್ತೆ ಕ್ರಾಂತಿ ಭೂಮಿಗೆ ಎಂದು ಉತ್ಸಾಹಿತನಾದ ಮಲ್ಲಯ್ಯ. ಆದರೆ ಬಂದದ್ದು ಪೋಲೀಸರು.

ಪೋಲೀಸರು ಎಳೆದೊಯ್ದ ಮಲ್ಲಯ್ಯ ಮರಳಿ ಈ ಭೂಮಿಗೆ ಬರಲಿಲ್ಲ. ಲೇಖಕರ ನೋವಿನ ಒದ್ದಾಟದೊಂದಿಗೆ ಕಥೆ ಮುಗಿಯುತ್ತದೆ. ಊರು ಸೇರುವ ಹೊತ್ತಿಗೆ ಮಲ್ಲಯ್ಯನೂ ಕತ್ತಲೆಯಲ್ಲಿ ಕರಗಿ ಹೋಗಿದ್ದ.

ಸರಿರಾತ್ರಿಯ ಹೊತ್ತಿಗೆ ದೇವದೂತರು ಪ್ರವೇಶಿಸುತ್ತಾರಂತೆ. ಆದರೆ ನನ್ನ ಕಥೆಯ ನಾಯಕ ಮಾತ್ರ ಎಲ್ಲೋ ಕಾಣೆಯಾಗಿದ್ದ. ಮೊರೆವ ಕತ್ತಲಿನಲ್ಲಿ ಮಲ್ಲಯ್ಯ ಎತ್ತ ಹೋದ?

ಮಲ್ಲಯ್ಯ ಮರೆಯಾದದ್ದು 1950, ಇಂದು 1979. ವರ್ಷಗಳು ಕಳೆದಂತೆಲ್ಲಾ ಪೋಲೀಸರ ಕತ್ತಿಗಳಿಗೆ, ಸೈನ್ಯದ ಬಂದೂಕಿಗೆ, ಏಜೆಂಟರ ಚೂರಿಗಳಿಗೆ ನೂರು, ಸಾವಿರ ಜನ ಮಲ್ಲಯ್ಯಗಳು ಬಲಿಯಾಗಿದ್ದಾರೆ. ರಾತೋರಾತ್ರಿ ಈ ಪುಣ್ಯ ಭೂಮಿಯಲ್ಲಿ ಜನ ಮಾಯವಾಗುತ್ತಾರೆ. ಒಂದಷ್ಟು ದಿನ ಕಳೆದಮೇಲೆ ಯಾವುದೋ ಹೊಳೆಯಲ್ಲಿ ಗುರುತು ಸಿಕ್ಕದ ಹೆಣಗಳು ತೇಲುತ್ತವೆ. ಯಾವುದೋ ಕಾಡಿನಿಂದ ನಾಯಿನರಿಗಳು ಎಳೆದು ತಂದ ಅರ್ದಂಬರ್ಧ ದೇಹಗಳು ಊರಿನ ಮಧ್ಯೆ ಬೀಳುತ್ತವೆ, ನಮ್ಮ ಆತ್ಮಸಾಕ್ಷಿಯ ಹಾಗೆ.

ಈ ಮಲ್ಲಯ್ಯಗಳು ಗೂಂಡಾಗಳಲ್ಲ. ಕೊಲೆಗಡುಕರಲ್ಲ. ಕಾಳಸಂತೆಕೋರರಲ್ಲ. ಖೋಟಾನೋಟಿನ ಸ್ವಾಮಿಗಳಲ್ಲ. ಎಳೆ ಹುಡುಗಿಯರ ಮೇಲೆ ಅತ್ಯಾಚಾರಮಾಡಿ ಗಾಳಿಯನ್ನು ರಕ್ತಮಯವನ್ನಾಗಿ ಮಾಡಿದ ಖೂಳರೂ ಅಲ್ಲ. ಶೋಷಣೆಯ ವಿರುದ್ಧ, ಅಮಾನವೀಯ ವ್ಯವಸ್ಥೆಯ ವಿರುದ್ಧ ಬಂಡೆದ್ದ ಮನುಷ್ಯರಷ್ಟೆ ಅವರು. ಆದರೆ ಈ ಕೊಲೆಗಳ ಬಗ್ಗೆ ಅಂತಃಕರಣದ ಕಣ್ಣು ಕಳೆದುಕೊಂಡಿರುವ ನಮ್ಮ "ಪ್ರಜಾಸತ್ತಾತ್ಮಕ ವ್ಯವಸ್ಥೆ" ಉಸಿರೆತ್ತುವುದಿಲ್ಲ. ಅದಕ್ಕೆ ರೋಗ ಬಡಿದಿದೆ. ಫ್ಯಾಸಿಸಂ ಮೇಲಿನ ತಮ್ಮ ಪುಸ್ತಕದಲ್ಲಿ ಹೃದಯ ಬಡಿಯುವ ಸಿಟ್ಟಿನಿಂದ ಅರುಣ್‌ಶೌರಿ ಹೇಳುತ್ತಾರೆ: "ಈ ರೋಗಿ ಸಾಯಲೇ ಬೇಕು".

ಮಲ್ಲಯ್ಯಗಳ ಆತ್ಮಗಳು ಪ್ರತಿದಿನ ಹ್ಯಾಮ್ಲೆಟ್‌ಗಳ ಅಂತರಂಗದ ಕದವನ್ನು ತಟ್ಟಿ ಕೇಳುತ್ತಿವೆ: ನಮ್ಮನ್ನು ಕೊಂದವರಿಗೆ ಯಾವಾಗ ಶಿಕ್ಷೆ? ಕೊರೆವ ಚಳಿಯಲ್ಲಿ ದಟ್ಟ ಕತ್ತಲಿನಲ್ಲಿ ಅಲೆವ ಆತ್ಮಗಳಿಗೆ ನೆಮ್ಮದಿ ಯಾವಾಗ?"

○

ಹುಚ್ಚು ಪ್ರಚಾರಗಳು

[4ನೇ ಪುಟದಿಂದ]

ಜನತೆಯ ಮೇಲೆ ಹೇರಬೇಕು ಎಂದು ಒತ್ತಾಯಿಸುವುದು ಒಳ್ಳೆಯದಲ್ಲ.

ಚರಣ್‌ಸಿಂಗ್ ಸರ್ಕಾರಕ್ಕೆ ಅದರ ರಚನೆಯ ಸಮಯದಲ್ಲಿ ಸಂಸತ್ತಿನ ವಿಶಾಲ ಬೆಂಬಲ ಬೇರೆಯಾವುದೇ ಪಕ್ಷಕ್ಕಿಂತ ಹೆಚ್ಚಾಗಿತ್ತು. ಕಾಂಗ್ರೆಸ್ (ಐ) ಬೆಂಬಲದಿಂದ ವಿರೋಧಕ್ಕೆ ತನ್ನ ನಿಲುವನ್ನು ಬದಲಾಯಿಸಿಕೊಳ್ಳದಿದ್ದರೆ ಅದು ಅವಿಶ್ವಾಸ ನಿರ್ಣಯನ್ನು ಗೆದ್ದು ಕೊಂಡಿರುತ್ತಿತ್ತು. ಆದ್ದರಿಂದ, ಪಕ್ಷಗಳ ನಡುವೆ ಒಪ್ಪಿಗೆ ಇಲ್ಲದಿರುವಾಗ, ಮಧ್ಯಕಾಲೀನ ಚುನಾವಣೆ ನಡೆಯುವವರೆಗೆ ಇದೇ ಮುಂದುವರಿಯುವುದು ಸೂಕ್ತವಾಗಿತ್ತು.

ಚರಣ್‌ಸಿಂಗ್ ಸರ್ಕಾರವು ಉಸ್ತುವಾರಿ ಸರ್ಕಾರವಾಗಿ ಮುಂದುವರೆಯುವುದನ್ನು ವಿರೋಧಿಸಿ, ರಾಷ್ಟ್ರಪತಿಯವರು ಬೇರೊಂದು ಉಸ್ತುವಾರಿ ಸರ್ಕಾರವನ್ನು ನೇಮಿಸಬೇಕೆಂದು ಒತ್ತಾಯಿಸುತ್ತಿರುವವರು ನಿಜವಾಗಿಯೂ ರಾಷ್ಟ್ರಪತಿಯವರಿಗೆ ಸಂವಿಧಾನವು ಕೊಟ್ಟಿರುವ ಅಧಿಕಾರಕ್ಕಿಂತ ಹೆಚ್ಚಿನದನ್ನು ನೀಡಲು ಬಯಸುತ್ತಿದ್ದಾರೆಂಬುದನ್ನು ಗಮನಿಸಬೇಕು. ಅಂಥ ಅಧಿಕಾರವು ಅಧ್ಯಕ್ಷಕೇಂದ್ರವುಳ್ಳ ಪದ್ಧತಿಯಲ್ಲಿ ಮಾತ್ರ ಸಾಧ್ಯವಾಗುವಂಥದ್ದು. ಪ್ರಜಾಪ್ರಭುತ್ವವಾದಿ ಮನಸ್ಸುಳ್ಳ ಯಾವ ವ್ಯಕ್ತಿಯೂ ಅಂಥ ಸಲಹೆಗೆ ಒಪ್ಪಿಗೆ ನೀಡಲಾರ.

●

ರೈತರ ಉತ್ಪನ್ನಕ್ಕೆ ಯೋಗ್ಯ ಬೆಲೆ ದೊರೆಯಲಿ
"ಜಂಟೀ ಕಾರ್ಯಕ್ರಮಕ್ಕೆ ಕರೆ"

ಎರಡು ಅಖಿಲ ಭಾರತ ಕಿಸಾನ್ ಸಭೆಗಳ ಪ್ರಧಾನ ಕಾರ್ಯದರ್ಶಿಗಳಾದ ಇಂದ್ರದೀಪ್ ಸಿನ್ಹ ಎಂ.ಪಿ. ಮತ್ತು ಕೆ. ಚಾತುನ್ನಿ ಮಾಸ್ಟರ್ ಇವರುಗಳು ಒಂದು ಜಂಟೀಹೇಳಿಕೆಯನ್ನು ಕೊಟ್ಟಿದ್ದಾರೆ:

. ಎರಡು ಕಿಸಾನ್ ಸಭೆಗಳ ಪ್ರತಿನಿಧಿಗಳು ಆಗಸ್ಟ್ 22–23ರಂದು ನವ ದೆಹಲಿಯಲ್ಲಿ ಸಭೆ ಸೇರಿ. ಸದ್ಯದ ಕೃಷಿ ಪರಿಸ್ಥಿತಿ, ಕೃಷಿಸರಕುಗಳಿಗೆ ಸರಿಯಾದ ಬೆಲೆ ದೊರೆಯುವ ಪ್ರಶ್ನೆ ಮುಂತಾದ ವಿಚಾರಗಳನ್ನು ಚರ್ಚಿಸಿದರು.

ಕೈಗಾರಿಕಾ ಉತ್ಪನ್ನಗಳು, ಬಳಕೆದಾರ ವಸ್ತುಗಳಿಗೆ ಹೋಲಿಸಿದರೆ ಕೃಷಿ ಉತ್ಪನ್ನಗಳ ಬೆಲೆಗಳು ಸತತವಾಗಿ ಇಳಿಯುತ್ತಿದ್ದು, ತೆರಿಗೆ ಭಾರವೂ ಸೇರಿ ರೈತರ ಸ್ಥಿತಿ ದೇಶದಲ್ಲಿ ನಿರಾಶಾದಾಯಕವಾಗಿದೆ. ಕಾಂಗ್ರೆಸ್‌ಆಡಳಿತದಲ್ಲೂ ಹೀಗೇ ಇದ್ದು, ಜನತಾ ಆಡಳಿತದಲ್ಲಿ ಈ ಸ್ಥಿತಿ ಮತ್ತಷ್ಟು ಹದಗೆಟ್ಟಿದೆ. ಸದ್ಯದ ಬೆಲೆಏರಿಕೆ ಇನ್ನೂ ಹೆಚ್ಚಿದ್ದು, ಎರಡು ಸರಕುಗಳ ನಡುವಣ ಬೆಲೆ ಅಂತರ ಮತ್ತಷ್ಟು ವಿಶಾಲವಾಗಿ ಬಳಕೆದಾರನಿಗೆ ಯಾವ ವಿಧದಲ್ಲೂ ಪ್ರಯೋಜನವಿಲ್ಲವಾಗಿದೆ.

ಆದ್ದರಿಂದ, ಎರಡು ಕಿಸಾನ್‌ಸಭೆಗಳ ಪ್ರತಿನಿಧಿಗಳು ಸಭೆ ಸೇರಿ, ಇತರ ರೈತ ಸಂಸ್ಥೆಗಳು ಮತ್ತು ರೈತಪರ ಪಕ್ಷಗಳನ್ನು ಸಂಘಟಿಸಿ ಸೆಪ್ಟೆಂಬರ್ ಅಂತ್ಯದ ವೇಳೆಗೆ ದೆಹಲಿಯಲ್ಲಿ ಒಂದು ಜಂಟೀ ಸಮ್ಮೇಳನ ನಡೆಸಲು ತೀರ್ಮಾನಿಸಿದ್ದಾರೆ. ಕೃಷಿ ಉತ್ಪನ್ನಕ್ಕೆ ಲಾಭದಾಯಕ ಬೆಲೆ, ಕೃಷಿ ಮತ್ತು ಕೈಗಾರಿಕಾ ಉತ್ಪನ್ನಗಳ ನಡುವಣ ಬೆಲೆ ಅಂತರ, ಕೃಷಿ ಉಪಕರಣಗಳನ್ನು ನಿಗದಿತ ಬೆಲೆಗೆ ಸರಬರಾಜು ಮಾಡುವುದು ಮುಂತಾದ ಪ್ರಶ್ನೆಗಳನ್ನು ಇಲ್ಲಿ ಚರ್ಚಿಸಲಾಗುತ್ತದೆ.

ಆಗಸ್ಟ್ 22–23ರ ಸಭೆಯಲ್ಲಿ ಎಂ. ಬಸವಪುನ್ನಯ್ಯ ಹರಿಕಿಷನ್‌ಸಿಂಗ್ ಸುರ್‌ಜಿತ್, ಚಾತುನ್ನಿಮಾಸ್ಟರ್, ಬಿನೊಯ್ ಚೌಧುರಿ, ಡಾ. ಜಡ್. ಎ. ಅಹಮದ್ ವೈ. ವಿ. ಕೃಷ್ಣರಾವ್, ಇಂದ್ರದೀಪ್ ಸಿನ್ಹ ಮತ್ತು ಚಜ್ಜುಮಲ್ ವೈದ್ ಅವರುಗಳು ಭಾಗವಹಿಸಿದ್ದರು.

●

ವಿಯೆಟ್ನಾಮಿಗೆ ಅಭಿನಂದನೆಗಳು

ಸೆಪ್ಟೆಂಬರ್ 2, 1945 ರಂದು ವಿಯೆಟ್ನಾಮಿನ ಪ್ರಜಾಪ್ರಭುತ್ವವಾದಿ ಗಣರಾಜ್ಯ (ಈಗ ಸಮಾಜವಾದಿ ಗಣರಾಜ್ಯ) ಸ್ಥಾಪನೆಯಾಯಿತು. ಈ ಸಂತಸದ ದಿನದ ಮುವತ್ತನಾಲ್ಕನೇ ವಾರ್ಷಿಕೋತ್ಸವದಂದು, ವಿಯೆಟ್ನಾಮಿನ ಜನತೆಗೆ ಮತ್ತು ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷಕ್ಕೆ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತನ್ನ ಕ್ರಾಂತಿಕಾರಿ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಫ್ರೆಂಚ್ ಮತ್ತು ಜಪಾನಿ ಸಾಮ್ರಾಜ್ಯಶಾಹಿಯ ವಿರುದ್ಧ ವಿಯೆಟ್ನಾಂ ನಡೆಸುತ್ತಿದ್ದ ಹೋರಾಟದ ಸಂದರ್ಭದಲ್ಲಿ ಅಧ್ಯಕ್ಷ ಹೋ ಚಿ ಮಿನ್ಹ್ ಅವರು ವಿಯೆಟ್ನಾಂ ಪ್ರಜಾಪ್ರಭುತ್ವವಾದಿ ಗಣರಾಜ್ಯದ ಘೋಷಣೆಯನ್ನು ಮಾಡಿದ ದಿವಸ ವಿಯೆಟ್ನಾಂ ಜನತೆಗೆ ಮಹಾನ್ ವಿಜಯದ ದಿವಸ. ನಂತರ ಮೂವತ್ತು ವರ್ಷಗಳವರೆಗೆ ಅವರು ಫ್ರೆಂಚ್ ವಸಾಹತುಶಾಹಿ ಮತ್ತು ಅಮೆರಿಕದ ಸಾಮ್ರಾಜ್ಯಶಾಹಿಯೊಡನೆ ಹೋರಾಡಿ ಈ ವಿಜಯವನ್ನು ಕಾಪಾಡಿಕೊಳ್ಳಬೇಕಾಯಿತು.

ವಿಯೆಟ್ನಾಂ ಜನತೆಯ ದೃಢ ಮನೋಭಾವ, ಸ್ವಾತಂತ್ರ್ಯ ಪ್ರೇಮ ಮತ್ತು ಅವರಿಗೆ ಸಿಕ್ಕ ಸರಿಯಾದ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ನಾಯಕತ್ವಗಳು ಅವರಿಗೆ ಈ ಸಾಧನೆಯನ್ನು ತಂದಿವೆ. ಅಮೆರಿಕದ ಸಾಮ್ರಾಜ್ಯಶಾಹಿಗೆ ಬಲವಾದ ಪೆಟ್ಟು ನೀಡಿದ ಅವರ ದೃಢತೆ ಜಗತ್ತಿಗೇ ಆದರ್ಶವಾಗಿದೆ. ಈಗ ವಿಯೆಟ್ನಾಂ ಒಂದುಗೂಡಿದೆ. ಆದರೆ ಯುದ್ಧದ ಕಪ್ಪುಕಲೆಗಳು ಇನ್ನೂ ಅಲ್ಲಿ ಉಳಿದಿವೆ. ಈ ಮಧ್ಯೆ ಪಾಲ್‌ಪಾಟ್ ಆಳಿಕೆ ಪತನ ಮತ್ತು ಚೀನಾದ ಪ್ರವೇಶಗಳು ಅಲ್ಲಿನ ಶಾಂತಿಯನ್ನು ಕದಡಿವೆ. ಸಮಾಜವಾದಿ ಪುನರ್ರಚನೆಯ ಕಾರ್ಯವನ್ನು ಬಿಟ್ಟು ಈ ನಷ್ಟಗಳ ರಿಪೇರಿಗೆ ವಿಯೆಟ್ನಾಂ ಈಗ ಗಮನ ಹರಿಸಬೇಕಾಗಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ವಿಯೆಟ್ನಾಂ ಜನತೆಗೆ ತನ್ನ ಸಹಾನುಭೂತಿ ಮತ್ತು ಬೆಂಬಲಗಳನ್ನು ವ್ಯಕ್ತಪಡಿಸುತ್ತದೆ. ವಿಯೆಟ್ನಾಂ ಮತ್ತು ಚೀನಗಳ ನಡುವೆ ಆರಂಭವಾಗಿರುವ ಮಾತುಕತೆಗಳು ಸೌಹಾರ್ದಯುತವಾಗಿ ಕೊನೆಗೊಳ್ಳುತ್ತವೆಂದು ಅದು ಆಶಿಸುತ್ತದೆ.

○

ರೈಲ್ವೆ ಸಂಚಾರ ಮುಂದುವರಿಕೆಗೆ ಬೆಂಬಲ

ಕೋಲಾರ ಜಿಲ್ಲೆಯನ್ನು ಹಾದು ಬಂಗಾರಪೇಟೆಗೆ ಹೋಗುತ್ತಿದ್ದ ನ್ಯಾರೋಗೇಜ್ ರೈಲು ಕೋಲಾರ ಜಿಲ್ಲೆಯ ಎಂಟು ತಾಲ್ಲೂಕುಗಳ ಮತ್ತು ಬೆಂಗಳೂರು ಜಿಲ್ಲೆಯ ಎರಡು ತಾಲ್ಲೂಕುಗಳಿಗೆ ಪ್ರಯೋಜನಕಾರಿಯಾಗಿತ್ತು. ಕಲ್ಲಿದ್ದಲು ಅಭಾವದಿಂದ ಈ ರೈಲು ಸಂಚಾರವನ್ನು ರದ್ದುಪಡಿಸಲಾಗುವುದೆಂದು ಪ್ರಕಟಣೆ ಹೊರಟಿತ್ತು ಇದನ್ನು ಪ್ರತಿಭಟಿಸಿ, ನಾಗರಿಕರು ರಾಜಕೀಯ ಪಕ್ಷಗಳು, ಶ್ರೀ ವಾಟಾಳ್ ನಾಗರಾಜ್ ನೇತೃತ್ವದ ಕನ್ನಡ ಚಳುವಳಿಗಾರರು ಚಳುವಳಿ ನಡೆಸಲು ಆರಂಭಿಸಿದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೋಲಾರ ಜಿಲ್ಲೆಯ ಶಾಖೆಯು ಈ ಚಳುವಳಿಗೆ ತನ್ನ ಸಕ್ರಿಯ ಬೆಂಬಲ ಸೂಚಿಸಿದೆ.

●

40 ಲಕ್ಷವನ್ನು ದಾಟಿದ ಕಿಸಾನ್‌ಸಭಾ ಸದಸ್ಯತ್ವ

ರೈತ ಸಂಘಟನೆಗಳ ಸಂಯುಕ್ತ ಹೋರಾಟಕ್ಕೊಂದು ಕಾರ್ಯಕ್ರಮ

ಅಖಿಲ ಭಾರತ ಕಿಸಾನ್ ಸಭಾದ ಪದಾಧಿಕಾರಿಗಳ ಸಭೆ ನವದೆಹಲಿಯಲ್ಲಿ ಕಳೆದ ಆಗಸ್ಟ್ 14 ಮತ್ತು 15ರಂದು ನಡೆಯಿತು. ಈ ಸಭೆಯಲ್ಲಿ ಅಧ್ಯಕ್ಷ ಬಿನಾಯ್ ಕೃಷ್ಣ ಚೌಧರಿ, ಉಪಾಧ್ಯಕ್ಷರುಗಳಾದ ಹರಿಕಿಷನ್‌ಸಿಂಗ್ ಸುರ್ಜಿತ್ ಮತ್ತು ಎಂ. ಎ. ರಸೂಲ್, ಪ್ರಧಾನ ಕಾರ್ಯದರ್ಶಿಗಳಾದ ಚಾತುನ್ನಿ ಮಾಸ್ಟರ್ ಮತ್ತು ಜಂಟಿ ಕಾರ್ಯದರ್ಶಿಗಳಾದ ಎನ್. ಶಂಕರಯ್ಯ. ಸಾಂತಿಮೊಯಿ ಘೋಷ್ ಮತ್ತು ಪಿ. ಕೆ. ಬಾಂಡನ್ ಹಾಜರಿದ್ದರು.

ಈ ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿಯ ಕಾರ್ಯವರದಿಯನ್ನು ಮತ್ತು ವಿವಿಧ ರಾಜ್ಯಗಳಿಂದ ಬಂದ ವರದಿಗಳನ್ನು ಚರ್ಚಿಸಲಾಯಿತು. ಹಾಗೆಯೇ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು.

1978-79ರಲ್ಲಿ ಅಖಿಲ ಭಾರತ ಕಿಸಾನ್ ಸಭಾದ ಸದಸ್ಯತ್ವ ಅಂತಿಮವಾಗಿ 4,116,212 ಆಗಿತ್ತೆಂಬುದನ್ನು ಈ ಸಭೆ ಗಮನಿಸಿತು. ಸದಸ್ಯತ್ವದ ವಿವರಗಳು ಹೀಗಿವೆ:

ಪಶ್ಚಿಮ ಬಂಗಾಳ ಕಿಸಾನ್ ಸಭಾ	...	2,845,709
ಕೇರಳ ಕಿಸಾನ್ ಸಭಾ	...	281,476
ಕೇರಳ ಕೃಷಿ ಕಾರ್ಮಿಕರ ಸಂಘ	...	106,144
ಆಂಧ್ರ ಪ್ರದೇಶ ಕೃಷಿ ಕಾರ್ಮಿಕರ ಸಂಘ	...	150,000
ಆಂಧ್ರ ಪ್ರದೇಶ ಕಿಸಾನ್ ಸಭಾ	...	100,000
ಬಿಹಾರ ಕಿಸಾನ್ ಸಭಾ	...	127,400
ತಮಿಳುನಾಡು ಕಿಸಾನ್ ಸಭಾ	...	126,400
ಪಂಜಾಬ್ ಕಿಸಾನ್ ಸಭಾ	...	70,524
ಪಂಜಾಬ್ ದೇಹಾತಿ ಮಜ್‌ದೂರ್ ಸಭಾ	...	33,526
ತ್ರಿಪುರ ಕಿಸಾನ್ ಸಭಾ	...	44,459
ತ್ರಿಪುರ ಉಪಜಾತಿ ಗಣಶಕ್ತಿ ಪರಿಷತ್ತು	...	21,000
ತ್ರಿಪುರ ಕೋಹತ್ ಮಜೂರ್ ಯೂನಿಯನ್	...	1,624
ಉತ್ತರ ಪ್ರದೇಶ ಕಿಸಾನ್ ಸಭಾ	...	58,582
ಆಸ್ಸಾಂ ರಾಜ್ಯ ಕಿಸಾನ್ ಸಭಾ	...	38,000
ಕರ್ನಾಟಕ ರಾಜ್ಯ ಕಿಸಾನ್ ಸಭಾ	...	18,211
ಮಹಾರಾಷ್ಟ್ರ ಕಿಸಾನ್ ಸಭಾ	...	32,000
ರಾಜಾಸ್ಥಾನ್ ಕಿಸಾನ್ ಸಭಾ	...	30,000
ಒರಿಸ್ಸಾ ರಾಜ್ಯ ಕಿಸಾನ್ ಸಭಾ	...	15,157
ಗುಜರಾತ್ ಕಿಸಾನ್ ಸಭಾ	...	8,000
ಹರಿಯಾಣ ಕಿಸಾನ್ ಸಭಾ	...	4,000
ಜಮ್ಮು ಮತ್ತು ಕಾಶ್ಮೀರ ಕಿಸಾನ್ ಸಭಾ	...	2,000
ಹಿಮಾಚಲ ಪ್ರದೇಶ ಕಿಸಾನ್ ಸಭಾ	...	2,000
	ಒಟ್ಟು	4,116,212

ಗಮನಿಸಿ: ಕೇರಳ ರಾಜ್ಯ ಕೃಷಿ ಕಾರ್ಮಿಕರ ಸಂಘವು ಸಾಮಾನ್ಯವಾಗಿ ಡಿಸೆಂಬರ್‌ನಲ್ಲಿ ಸದಸ್ಯತ್ವದ ಕೊನೆಯ ಪಟ್ಟಿಯನ್ನು ಕೊಡುತ್ತದೆ. ಆದ್ದರಿಂದ ಮೇಲೆ ಕೊಟ್ಟ ಸದಸ್ಯತ್ವವೇ ಅಂತಿಮವಲ್ಲ.

1979-80ಕ್ಕೆ ಪ್ರತಿ ರಾಜ್ಯಗಳಿಗೂ ಕನಿಷ್ಟ ಸದಸ್ಯತ್ವದ ಪಾಲನ್ನು ಈ ಸಭೆ ನಿರ್ಧರಿಸಿತು. ಈ ವರ್ಷದ ಗುರಿ 60 ಲಕ್ಷಕ್ಕೂ ಹೆಚ್ಚು ಸದಸ್ಯತ್ವವನ್ನು ಸಾಧಿಸುವುದಾಗಿದೆ.

ಸಂಯುಕ್ತ ಹೋರಾಟಕ್ಕೆ ಕರೆ :

ಕಬ್ಬು, ಹತ್ತಿ, ಆಲೂಗಡ್ಡೆ ಮುಂತಾದ ಕೃಷಿ ಉತ್ಪನ್ನಗಳ ಬೆಲೆಗಳು ಸತತವಾಗಿ ಇಳಿಯುತ್ತಿರುವುದನ್ನು ಸಭೆ ಕಳಕಳಿಯಿಂದ ಗಮನಕ್ಕೆ ತೆಗೆದುಕೊಂಡಿತು. ಇದರ ಜೊತೆಗೆ, ಭತ್ತ ಮತ್ತು ಗೋದಿಯ ಅಧಿಕ ಸ್ಟಾಕುಗಳನ್ನು ಸರ್ಕಾರ ಮಾರುಕಟ್ಟೆಯಲ್ಲಿ ಕೊಂಡುಕೊಳ್ಳುವ ವ್ಯವಸ್ಥೆಯಿಲ್ಲದ ಸ್ಥಳಗಳಲ್ಲಿ ಈ ಆಹಾರ ಧಾನ್ಯಗಳ ಬೆಲೆ ತೀರಾ ಕಡಿಮೆಯಿರುವುದೂ ಗಮನಕ್ಕೆ ಬಂತು. ಕೃಷಿ ಉತ್ಪನ್ನಗಳ ಬೆಲೆಗಳು ಇಳಿಯುತ್ತಿರುವುದೇ ರೈತರ ಮುಖ್ಯ ಸಮಸ್ಯೆಯಾಗಿದೆ.

ಇದರೊಂದಿಗೆ ರೈತರಿಗೆ ಅವಶ್ಯಕತೆಯಿರುವ ಗೊಬ್ಬರ, ಕೃಷಿ ಉಪಕರಣಗಳು, ಡೀಸೆಲ್ ಎಣ್ಣೆ, ಕ್ರಿಮಿನಾಶಕಗಳು ಇತ್ಯಾದಿಗಳ ಬೆಲೆ ಒಂದೇ ಸಮನೆ ಏರುತ್ತಿರುವುದು ರೈತರಿಗೆ ಸಂಕಷ್ಟವನ್ನು ಉಂಟುಮಾಡಿದೆ.

ಎಲ್ಲಾ ರೈತರ ಸಂಘಟನೆಗಳನ್ನು ಒಂದುಗೂಡಿಸಿ ಈ ಸಮಸ್ಯೆಗಳ ಮೇಲೆ ಗಮನ ಕೇಂದ್ರೀಕರಿಸಬೇಕು. ಹಾಗೆಯೇ ಅಖಿಲ ಭಾರತ ಮಟ್ಟದಲ್ಲಿ ಸಂಯುಕ್ತ ರಂಗವನ್ನು ರಚಿಸಿ, ಎಲ್ಲಾ ರೈತ ಸಂಘಟನೆಗಳ ಸಂಯುಕ್ತ ಹೋರಾಟಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಪದಾಧಿಕಾರಿಗಳ ಸಭೆಯು ನಿರ್ಧಾರ ಮಾಡಿತು.

ಈ ಕೆಳಕಂಡ ಬೇಡಿಕೆಗಳ ಆಧಾರದ ಮೇಲೆ ಕನಿಷ್ಟ ಕಾರ್ಯಕ್ರಮವೊಂದನ್ನು ಹಾಕಿಕೊಂಡು ಇತರ ರೈತ ಸಂಘಟನೆಗಳೊಂದಿಗೆ ಸಂಯುಕ್ತ ಹೋರಾಟಕ್ಕೆ ಬುನಾದಿ ಹಾಕಬೇಕೆಂದು ನಿರ್ಧರಿಸಲಾಯಿತು.

1. ಕೃಷಿಕಾರ್ಮಿಕರಿಗೂ ಅಖಿಲ ಭಾರತ ಕನಿಷ್ಟಕೂಲಿ ಶಾಸನ ಜಾರಿಯಾಗಲಿ.

ಮನೆ ಕಟ್ಟಿಕೊಳ್ಳಲು ಭೂಮಿ ಮತ್ತು ಆರ್ಥಿಕ ಸಹಾಯ ಸಿಗಲಿ.

2. ಸರ್ಕಾರಿ ಜಮೀನು ಹಾಗೂ ಹೆಚ್ಚುವರಿ ಜಮೀನನ್ನು ಭೂಹೀನರಿಗೆ ಮತ್ತು ಬಡ ರೈತರಿಗೆ ಹಂಚಲಿ

3. ಬಡ ರೈತರು, ಕೃಷಿ ಕಾರ್ಮಿಕರು ಮತ್ತು ಅಂಚಿನಲ್ಲಿರುವ ರೈತರ ಋಣ ವಿಮುಕ್ತಿಯಾಗಲಿ.

4. ಚಂಡಮಾರುತ, ಬರಗಾಲ ಮತ್ತು ಪ್ರವಾಹ ಪೀಡಿತರಿಗೆ ಪೂರ್ತಿ ಪರಿಹಾರ ಸಿಗಲಿ.

5. ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆಗಳು ಸಿಗಲಿ. ಕೃಷಿ ಉಪಕರಣಗಳು, ಗೊಬ್ಬರ ಇತ್ಯಾದಿಗಳು ಸುಲಭವಾಗಿ ದೊರೆಯುವಂತಾಗಲಿ.

6. ಮೂಲಭೂತ ಭೂ ಸುಧಾರಣೆ ಕಾರ್ಯಗತವಾಗಲಿ.

7. ಗೇಣಿದಾರರ ಮತ್ತು ಹರಿಜನ-ಗಿರಿಜನರ ಮೇಲಿನ ಅತ್ಯಾಚಾರಗಳು, ಕೊಲೆಗಳು, ಹೊಡೆದಾಟಗಳನ್ನು ತಡೆಗಟ್ಟಿ.

8. ಹಳ್ಳಿಗಳಲ್ಲಿ ಕನಿಷ್ಟ ಜೀವನ ಸೌಲಭ್ಯಗಳು — ಕುಡಿಯುವ ನೀರು, ರಸ್ತೆಗಳು; ಶಾಲೆಗಳು; ಆಸ್ಪತ್ರೆಗಳು— ಸಿಗಲಿ.

ಕೇಂದ್ರ ಕಿಸಾನ್ ಸಮಿತಿಯ ಸಭೆಯು 1979ರ ಅಕ್ಟೋಬರ್ ತಿಂಗಳ ಕೊನೆಯ ವಾರದಲ್ಲಿ ಸೇರಬೇಕೆಂದು ಪದಾಧಿಕಾರಿಗಳ ಸಭೆಯಲ್ಲಿ ನಿರ್ಧರಿಸಲಾಯಿತು. ಈ ಸಭೆಯಲ್ಲಿ ಮುಖ್ಯವಾಗಿ ಕೃಷಿ ಕಾರ್ಮಿಕರು, ಗೇಣಿದಾರರು ಮತ್ತು ಬಡ ರೈತರನ್ನು ಕಾಡುತ್ತಿರುವ ಗಹನ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲೂ ತೀರ್ಮಾನಿಸಲಾಯಿತು.

●

ನಿಧನ

ಮಂಗಳೂರು ತಾಲ್ಲೂಕು ದೇರಬೈಲು ಗ್ರಾಮದ ರೈತಸಂಘದ ಕಾರ್ಯಕರ್ತರಾದ ಕಾಂ. ಕೆ. ಮುಂಡಪ್ಪ ಶೆಟ್ಟಿಗಾರರ ತಂದೆ ದೋಗ ಶೆಟ್ಟಿಗಾರರು (80) ಕಳೆದ ತಾ. 22-8-79 ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.

ಮೃತರು ದ. ಕ. ಜಿಲ್ಲಾ ರೈತ ಸಂಘದ ಆರಂಭದಿಂದಲೂ ಅದರ ಸದಸ್ಯರಾಗಿದ್ದು ರೈತಸಂಘದ ಕಾರ್ಯಕ್ರಮಗಳಲ್ಲಿ ನಿಷ್ಠೆಯಿಂದ ಭಾಗ ವಹಿಸಿ ಸಹಕರಿಸುತ್ತಿದ್ದರು.

ದ. ಕ. ಜಿಲ್ಲಾ ಗೈತಸಂಘವು ಮೃತರಿಗೆ ಶ್ರದ್ಧಾಂಜಲಿಯರ್ಪಿಸಿ, ಅವರ ಕುಟುಂಬದವರ ದುಃಖದಲ್ಲಿ ಸಹತಾಪ ವ್ಯಕ್ತ ಪಡಿಸಿದೆ.

ನಿಧನ

ಬೆಂಗಳೂರಿನ ಐ. ಟಿ. ಐ. ನಲ್ಲಿ ಕೆಲಸ ಮಾಡುತ್ತಿದ್ದ ಸಿ. ಐ. ಟಿ. ಯು ವಿನ ಹಿತೈಷಿಗಳಾದ ಕಾಂ. ಎಂ. ಎ. ಗೋಪಾಲ್‌ರವರು ತಾ. 29-8-79 ರಂದು ಕಾರಿನ ಅಪಘಾತದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಬೆಳ್ತಂಗಡಿ ರೈತಸಂಘ ಸಭೆ

ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕು ರೈತಸಂಘದ ಸಭೆಯು ಕಾಮ್ರೇಡ್ ಪಿ. ಪಿ. ಮಥ್ಯಾಯವರ ಅಧ್ಯಕ್ಷತೆಯಲ್ಲಿ ಜರಗಿತು. ತಾಲ್ಲೂಕು ಕಾರ್ಯದರ್ಶಿ ಕೆ. ವಿ. ರಾಯರು ಸ್ವಾಗತಿಸುತ್ತಾ 'ರಾಷ್ಟ್ರದ ರಾಜಕೀಯವು ಗಲಿಬಿಲಿಯಲ್ಲಿರುವುದನ್ನೂ, ಎಲ್ಲೆಲ್ಲಿಯೂ ಅವ್ಯವಸ್ಥೆ, ನಿರುದ್ಯೋಗ, ಬೆಲೆ ಏರಿಕೆಗಳು ಸರ್ವ ವ್ಯಾಪಿಯಾಗಿರುವುದನ್ನೂ, ರಾಜ್ಯದಲ್ಲಿ ಜಾರಿಗೆ ತಂದಿರುವ ಭೂಸುಧಾರಣೆಯು ರೈತರಿಗೆ ಇನ್ನೂ ಸಮಸ್ಯೆಯಾಗಿರುವುದನ್ನೂ ವಿವರಿಸಿ ಸಂಘಟನೆಯನ್ನು ಬಲಪಡಿಸಿ ಅಗತ್ಯವುಳ್ಳ ಹೋರಾಟಗಳಿಗೆ ರೈತ, ಮಜೂರರು ಸಿದ್ಧರಾಗಬೇಕಿರುವುದನ್ನೂ' ವಿವರಿಸಿದರು. ಸಭೆಗೆ ಆಗಮಿಸಿದ್ದ ಕಾಮ್ರೇಡ್ ಪಿ. ರಾಮಚಂದ್ರ ರಾಯರು 'ಸಂಘಟಿತ ಕೃಷಿ ಕೂಲಿ, ಮಜೂರ, ರೈತರು ಮಾತ್ರ ದೇಶದ ಸಮಸ್ಯೆಗಳನ್ನು ಬಗೆಹರಿಸಬಲ್ಲರೇ ಹೊರತು, ಸ್ವಾರ್ಥಿ ರಾಜಕೀಯ ಪುಡಾರಿಗಳಲ್ಲ. ಆದುದರಿಂದ ಸಂಘಟನೆಯನ್ನು ಬಲಗೊಳಿಸಿ ಮುಂದೆ ಸಾಗಬೇಕಾಗಿರುವುದು ಅನಿವಾರ್ಯವಾಗಿದೆ' ಎಂದರು. ಜಿಲ್ಲಾ ಕಾರ್ಯದರ್ಶಿ ಕಾಮ್ರೇಡ್ ಜನಾರ್ಧನ ನ್ಯಾಕರು 'ರೈತ ಸಂಘಗಳ ಮುಂದೆ ಇಂದು ಅನೇಕ ಪ್ರಶ್ನೆಗಳಿರುವುದನ್ನೂ ಅದಕ್ಕೆ ತಕ್ಕ ಆಂದೋಲನಗಳನ್ನು ನಡೆಯಿಸಲು ಕೂಡಲೇ ಸಂಘಟಿತರಾಗಬೇಕಾದ ಅವಶ್ಯಕತೆ'ಗಳನ್ನೂ ಒತ್ತಿ ಹೇಳಿದರು. ಸದಸ್ಯರಲ್ಲಿ ಕಾಮ್ರೇಡ್ ಪಿ. ಎಲ್. ಗೌಡ, ಕೆ. ಮಂಜುನಾಥ, ಬಿ. ಸಂಜೀವ, ಪಾಪಚ್ಚನ್ ಮೊದಲಾದವರು ಮಾತಾಡಿದರು. ತಾಲ್ಲೂಕು ಸಂಘದ ಆಶ್ರಯದಲ್ಲಿ ಶೀಘ್ರವಾಗಿ ತೊಚಿತ್ತಾಡಿ, ಮಚ್ಚಿನ, ವೇಣೂರುಗಳಲ್ಲಿ ಕಚೇರಿಗಳನ್ನು ತೆರೆದು ಪೂರ್ಣಕಾಲೀನ ಕೆಲಸಗಾರರನ್ನು ನೇಮಿಸುವರೇ ನಿರ್ಣಯಗಳನ್ನು ಕೈಗೊಳ್ಳಲಾಯಿತು. ○

ಕಾಂ. ಕೃಷ್ಣಪಿಳ್ಳೆ ದಿನಾಚರಣೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಣ್ವತೀರ್ಥ ಮತ್ತು ಕುಂಜತ್ತೂರು ಶಾಖೆಗಳು ಮತ್ತು ಸಿ.ಐ.ಟಿ.ಯು. ವತಿಯಿಂದ ತಾ. 19-8-79 ರಂದು ಕಾಂ. ಕೃಷ್ಣಪಿಳ್ಳೆ ದಿನಾಚರಣೆಯನ್ನು ನಡೆಸಲಾಯಿತು. ಇದರ ಅಂಗವಾಗಿ ಬೆಳಿಗ್ಗೆ ಐದು ಘಂಟೆಗೆ ಪ್ರಭಾತಫೇರಿ ನಡೆಯಿತು. ಕಾಂ. ಕೃಷ್ಣಪಿಳ್ಳೆ ಅವರು ತಾ. 19-8-1948 ರಂದು ಹಾವು ಕಡಿದು ಮೃತರಾಗಿದ್ದರು.

ಪ್ರಭಾತಫೇರಿಯಲ್ಲಿ ಪಕ್ಷದ ಹಿತೈಷಿಗಳು, ಕಾರ್ಮಿಕರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಣ್ವತೀರ್ಥದಿಂದ ಹೊರಟ ಮೆರವಣಿಗೆ ಕುಂಜತ್ತೂರು, ಉದ್ಯಾವರ ಮಾರ್ಗವಾಗಿ ಮಂಜೇಶ್ವರ ರೈಲ್ವೆ ನಿಲ್ದಾಣದವರೆಗೆ ಹೋಗಿ ಅಲ್ಲಿಂದ ಮತ್ತೆ ಕುಂಜತ್ತೂರಿನ ಸಿ.ಐ.ಟಿ.ಯು. ಕಚೇರಿಗೆ ಹಿಂತಿರುಗಿತು. ○

ಬೀಡಿಕೆಲಸಗಾರರ ಸಮಿತಿ ಸಭೆ

ಅಖಿಲಭಾರತ ಬೀಡಿಕೆಲಸಗಾರರ ಸಮಿತಿಯು ಆಗಸ್ಟ್ 30, 31 ರಂದು ಬೆಂಗಳೂರಿನಲ್ಲಿ ಸಭೆ ಸೇರಿತ್ತು. ಕಾಂ. ಎಸ್. ಸೂರ್ಯನಾರಾಯಣ ರಾವ್ ಅವರು ಅಧ್ಯಕ್ಷತೆ ವಹಿಸಿದ್ದರು. ದೆಹಲಿಯ ಕಾಂ. ವಿಮಲಾ ರಣದಿವೆ, ಮಹಾರಾಷ್ಟ್ರದ ಕಾಂ. ಆರ್. ಎಸ್. ಮಂಗಲಾ, ಕಾಂ. ವಿ. ಕಣ್ಣನ್, ತಮಿಳುನಾಡಿನ ಕಾಂ. ಷಣ್ಮುಗಂ, ಕೇರಳದ ಕಾಂ. ಸಿ. ಕಣ್ಣನ್, ಪಿ. ವಿ. ಕುಟ್ಟಿ ಮತ್ತು ಸಹದೇವನ್, ಕರ್ನಾಟಕದ ಮೊಹಮದ್ ದಸ್ತಗೀರ್ ಮತ್ತು ರಾಮಚಂದ್ರ ರಾವ್ ಮೊದಲಾದವರು ಸಭೆಯಲ್ಲಿ ಭಾಗವಹಿಸಿದ್ದರು.

ಸಮಿತಿಯು ಮದ್ರಾಸಿನಲ್ಲಿ ಸಭೆ ಸೇರಿದ್ದ ನಂತರದ ಚಟುವಟಿಕೆಗಳು ಮತ್ತು ಹೋರಾಟಗಳ ವರದಿಯನ್ನು ಕಾಂ. ಸಿ. ಕಣ್ಣನ್ ಮಂಡಿಸಿದರು. ಪ್ರತಿಯೊಂದು ರಾಜ್ಯದ ಚಟುವಟಿಕೆಗಳನ್ನು ಇದರಲ್ಲಿ ನಿರೂಪಿಸಲಾಗಿತ್ತು. ಚರ್ಚೆಯ ನಂತರ ವರದಿ ಅಂಗೀಕೃತವಾಯಿತು.

ವಿವರವಾದ ಚರ್ಚೆಗಳ ನಂತರ ಸಭೆಯು ಕೆಲವು ಗೊತ್ತುವಳಿಗಳನ್ನು ಅಂಗೀಕರಿಸಿತು. ತಂಬಾಕಿನ ಮೇಲೆ ಕರವನ್ನು ತೆಗೆದು ಹಾಕಿದ ನಂತರ ಕಲ್ಯಾಣನಿಧಿ ಯೋಜನೆ ನಿಂತು ಹೋಗಿದೆ. ಆದ್ದರಿಂದ ವೆಲ್‌ಫೇರ್ ಸೆಸ್ ಕಾಯಿದೆಯ ಪ್ರಕಾರ ತಂಬಾಕಿನ ಮೇಲೆ ಸೆಸ್ ವಸೂಲಿ ಮಾಡಬೇಕೆಂದು ಸಭೆಯು ಭಾರತ ಸರ್ಕಾರಕ್ಕೆ ಮನವಿ ಮಾಡಿತು. ತಯಾರಾದ ಎಲ್ಲ ಬೀಡಿಗಳನ್ನೂ ಬೆಂಕಿಕಡ್ಡಿಯ ತರಹ ಲೇಬಲ್ ಗೊಳಪಡಿಸಬೇಕು, ಲೇಬಲ್ ಇಲ್ಲದ ಮತ್ತು ಇರುವ ಬೀಡಿಗಳ ನಡುವೆ ವ್ಯತ್ಯಾಸ ಇರಬಾರದು. ಅಲ್ಲದೆ ಸಾವಿರ ಬೀಡಿಗಳಿಗೆ ರೂ. 3-60 ಲೆವಿ ವಿಧಿಸುವುದನ್ನು ಶೇಕಡಾ ಐವತ್ತರಷ್ಟು ಕಡಿಮೆ ಮಾಡಬೇಕು ಎಂದು ಸಭೆ ಅಭಿಪ್ರಾಯಪಟ್ಟಿತು.

ಟ್ರೇಡ್‌ಮಾರ್ಕ್‌ಉಳ್ಳ ಮಾಲೀಕರು ಕಾಯಿದೆ ಜಾರಿಯನ್ನು ತಪ್ಪಿಸಿ, ಬೀಡಿ ಕೆಲಸಗಾರರಿಗೆ ಸವಲತ್ತುಗಳನ್ನು ಕೊಡುತ್ತಿಲ್ಲ. ಬೀಡಿ ಕೈಗಾರಿಕೆಯಲ್ಲಿನ ಕಾಂಟ್ರಾಕ್ಟ್ ಪದ್ಧತಿಯನ್ನು ತಪ್ಪಿಸಿ, ಇದಕ್ಕಾಗಿ ರಾಜ್ಯವಾರು ತ್ರಿಪಕ್ಷೀಯ ಸಭೆಗಳನ್ನು ನಡೆಸಬೇಕೆಂದು ಈ ಸಮಿತಿಯ ಸಭೆಯು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಮನವಿಮಾಡಿತು. ಪ್ರತಿ ಸಾವಿರ ಬೀಡಿಗೆ 8 ಅಥವಾ 9 ರೂ. ಗಳ ವೇತನ, ಹಿಂದಿನ ವೇತನಗಳ ನೀಡಿಕೆ, ಶೇಕಡಾ ಇಪ್ಪತ್ತರ ಬೋನಸ್, ಸರಾಸರಿಯ ಹೆಸರಿನಲ್ಲಿ ವೇತನದಲ್ಲಿ ಕಡಿತ ಮಾಡದಿರುವುದು, ಆರುದಿನಗಳ ಪೂರ್ತಿ ಕೆಲಸ–ಈ ಬೇಡಿಕೆಗಳಿಗಾಗಿ ಹೋರಾಟ ನಡೆಸುವಂತೆ ಎಲ್ಲ ರಾಜ್ಯಗಳ ಬೀಡಿಕೆಲಸಗಾರರ ಸಂಘಗಳಿಗೆ ಸಭೆ ಕರೆಕೊಟ್ಟಿತು. ದೇಶದಾದ್ಯಂತ 1979 ರ ಅಕ್ಟೋಬರ್ 17ನೇ ತಾರೀಕನ್ನು "ಬೀಡಿ ದಿನ"ವಾಗಿ ಆಚರಿಸಲೂ ಬೀಡಿಕೆಲಸಗಾರರಿಗೆ ಕರೆ ಕೊಡಲಾಗಿದೆ. 1979ರ ಸೆಪ್ಟೆಂಬರ್ 14 ರಂದು ಟೋಕನ್ ಮುಷ್ಕರ ನಡೆಸಲು ಒಗ್ಗೂಡಿರುವ ದೇಶದ ಸರ್ಕಾರಿ ವಲಯ ಕೆಲಸಗಾರರನ್ನು ಸಭೆ ಅಭಿನಂದಿಸಿತು.

ಬೆಲೆ ಏರಿಕೆಯ ಬಗ್ಗೆ ಸಭೆ ಕಾಳಜಿ ವ್ಯಕ್ತಪಡಿಸಿ, ಸರ್ವಾಧಿಕಾರಿ ಮತ್ತು ಮತೀಯ ಶಕ್ತಿಗಳ ವಿರುದ್ಧದ ಹೋರಾಟದಲ್ಲಿ ಬೀಡಿಕೆಲಸಗಾರರೂ ಸಹಕರಿಸಬೇಕೆಂದು ಸಭೆ ಮನವಿಮಾಡಿತು. ಬರುವ ಚುನಾವಣೆಯ ದೃಷ್ಟಿಯಿಂದ ನವೆಂಬರ್‌ನಲ್ಲಿ ಕಣ್ಣಾನೂರಿನಲ್ಲಿ ನಡೆಯಬೇಕಾಗಿದ್ದ ಅಖಿಲಭಾರತ ಬೀಡಿ ಕೆಲಸಗಾರರ ಸಮ್ಮೇಳನವನ್ನು 1980 ರ ಮಾರ್ಚಿಗೆ ಮುಂದೂಡಲು ಸಭೆ ನಿರ್ಧರಿಸಿತು. ●

ಯಶಸ್ವಿ ಶಿವಮೊಗ್ಗ ಬಂದ್

ಜನತೆಯ ಅಗತ್ಯವಸ್ತುಗಳಲ್ಲಿ ಒಂದಾದ ಸೌದೆಯ ಬೆಲೆಯನ್ನು ಟನ್ನಿಗೆ 150 ರೂಗಳವರೆಗೆ ಏರಿಸಿರುವ ವಿರುದ್ಧ ಪ್ರತಿಭಟಿಸಲು ಶಿವಮೊಗ್ಗ ನಗರದ ವಿವಿಧ ರಾಜಕೀಯ ಪಕ್ಷಗಳು ಹಾಗೂ ಸಂಸ್ಥೆಗಳು ಸೇರಿ ರಚಿಸಿಕೊಂಡಿರುವ "ನಾಗರಿಕ ಸೌಲಭ್ಯ ಸಮಿತಿ" ಆಶ್ರಯದಲ್ಲಿ 29-8-79ರಂದು ಶಿವಮೊಗ್ಗ ಬಂದ್ ಅನ್ನು ಯಶಸ್ವಿಯಾಗಿ ನಡೆಸಲಾಯಿತು.

ಶಿವಮೊಗ್ಗೆಯ ಮುಖ್ಯ ಬೀದಿಗಳಲ್ಲಿ ನಡೆದ ಮೆರವಣಿಗೆಯಲ್ಲಿ ಸಹಸ್ರಾರು ಜನ ಭಾಗವಹಿಸಿದ್ದರು. ಮೆರವಣಿಗೆಯು ನಂತರ ಜಿಲ್ಲಾಧಿಕಾರಿಗಳ ಕಚೇರಿಗೆ ತಲುಪಿತು. ಕಾರ್ಮಿಕರು, ವಿದ್ಯಾರ್ಥಿಗಳು, ಮಹಿಳೆಯರು ಎಲ್ಲ ವರ್ಗ ಜನತೆ ಇದರಲ್ಲಿ ಭಾಗವಹಿಸಿದ್ದರು. ಹೋಟೆಲ್‌ಗಳೆಲ್ಲ ಅಂದು ಬಂದ್ ಆಗಿದ್ದರಿಂದ ಹೋಟೆಲ್ ಕಾಮಿಕರೂ ಮೆರವಣಿಗೆಯಲ್ಲಿ ಹಾಜರಿದ್ದರು. ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಸೇರಿದ್ದ ಬೃಹತ್ ಸಭೆಯನ್ನು ಉದ್ದೇಶಿಸಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಎಸ್. ಬಿ. ಶಿವಶಂಕರ್, ಜನತಾ ಪಕ್ಷದ ಡಾ. ವ್ಯಾಸರಾವ್, ಕಾಂಗ್ರೆಸ ಎಂ. ನಾಗೇಂದ್ರರಾವ್, ಅಣ್ಣಾ ಡಿ.ಎಂ.ಕೆ.ಯ ಕುಪ್ಪುಸ್ವಾಮಿ ಮತ್ತು ಇತರ ಸಂಘ-ಸಂಸ್ಥೆಗಳ ನಾಯಕರು ಮಾತನಾಡಿದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಹಾಗೂ ನಾಗರಿಕ ಸೌಲಭ್ಯ ಸಮಿತಿಯ ಸಂಚಾಲಕ ಕಾಂ. ಚಂದು ಕುಟ್ಟಿಯವರು ಹೋರಾಟದ ಹಿನ್ನೆಲೆಯನ್ನು ವಿವರಿಸಿದರು. ಸಭೆಯ ಅಧ್ಯಕ್ಷತೆಯನ್ನು ನ್ಯಾಯವಾದಿ ಜಿ. ಎಸ್. ನಾಗರಾಜ್ ವಹಿಸಿದ್ದರು. ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಲಾಯಿತು. ●

ದೂರವಾಣಿ–ತಂತಿ ಮಜ್ದೂರ್ ಸಂಘದ ಸತ್ಯಾಗ್ರಹ

ಕರ್ನಾಟಕ ರಾಜ್ಯವಲಯದ ದೂರವಾಣಿ-ತಂತಿ ಕೆಲಸಗಾರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ 14-9-79 ರಂದು ಒಂದು ದಿನದ ಸತ್ಯಾಗ್ರಹ ಹೂಡಲಿದ್ದಾರೆ.

ಕೇಂದ್ರ ಸರ್ಕಾರದ ಈ ಇಲಾಖೆಯ ನೌಕರರ ಪರಿಸ್ಥಿತಿ ತುಂಬಾ ಶೋಚನೀಯವಾಗಿದ್ದು, ಇವರಿಗೆ ಉದ್ಯೋಗ ಭದ್ರತೆಯಾಗಲಿ ರಕ್ಷಣೆಯಾಗಲಿ ಇಲ್ಲ. ಇಲಾಖೆಯಲ್ಲಿ 3-4 ವರ್ಷ ದುಡಿದರೂ

ಕಂಬದಿಂದ ಕೆಳಗೆ ಬಿದ್ದು ಅಪಘಾತ ಸಂಭವಿಸಿದರೆ ವಿಚಾರಿಸುವವರೇ ಇಲ್ಲ. ಲೈನ್‌ಮನ್ ಸ್ಥಾನಕ್ಕೆ ಬಡ್ತಿ ಸಿಗಬೇಕಾದರೆ ಲಂಚ ಕೊಡಬೇಕಾಗಿದೆ. ಇದರಲ್ಲಿ ಸ್ವಜನ ಪಕ್ಷಪಾತವೂ ಇದೆ. ತಮ್ಮ ಮೇಲೆ ಆಗುತ್ತಿರುವ ಅನ್ಯಾಯ, ಶೋಷಣೆಗಳ ವಿರುದ್ಧ ಹೋರಾಡಲು ಈ ನೌಕರರು ಈಗ ಸಂಘಟಿತರಾಗಿದ್ದಾರೆ. 5-7-79ರಂದು ಬೇಡಿಕೆ ದಿನಾಚರಣೆಯನ್ನು ಆಚರಿಸಿ, 15 ಬೇಡಿಕೆಗಳ ಮನವಿಯನ್ನು ಅಧಿಕಾರಿಗಳಿಗೆ ಅರ್ಪಿಸಿದ್ದಾರೆ. ಈ ಬೇಡಿಕೆಗಳ ಈಡೇರಿಕೆಗೆ ಈಗ ಒಂದು ದಿನದ ಸತ್ಯಾಗ್ರಹ ಹೂಡಲಿದ್ದಾರೆ.

ಕೆಲಸ ಖಾಯಂಗೊಳಿಸುವಿಕೆ, ಉದ್ಯೋಗ ಭದ್ರತೆ, ಕನಿಷ್ಠ ವೇತನ, ಸಾಂದರ್ಭಿಕ ರಜೆ, ಅಪಘಾತಕ್ಕೆ ವೈದ್ಯಕೀಯ ನೆರವು ಮತ್ತು ಪರಿಹಾರಧನ, ಸಮವಸ್ತ್ರ, ಬಡ್ತಿ, ಓವರ್ ಟೈಂ ಭತ್ಯೆ, ಮುಂತಾದ ಬೇಡಿಕೆಗಳಲ್ಲಿರುವ ಸಮಸ್ಯೆಗಳ ಪರಿಹಾರಕ್ಕೆ ಈ ಸತ್ಯಾಗ್ರಹ ಒತ್ತಾಯಿಸುತ್ತದೆ. ಇತರ ಸಂಘ ಸಂಸ್ಥೆಗಳು ಇದನ್ನು ಬೆಂಬಲಿಸಬೇಕೆಂದು ಸಂಘದ ಅಧ್ಯಕ್ಷ ಬಿ. ರಾಮಕೃಷ್ಣ ಅವರು ಮನವಿ ಮಾಡಿದ್ದಾರೆ. ○

ಹಳಿಯಾಳದ ಪುರಸಭೆ ಚುನಾವಣೆಯಲ್ಲಿ ತಕರಾರು

ಹಳಿಯಾಳದ ನಗರ ಸಭೆಯ ವಿವಿಧ ಸಮಿತಿಗಳ ಅಧ್ಯಕ್ಷರ ಚುನಾವಣೆಯು ದಿನಾಂಕ 30-8-79 ರಂದು ನಡೆಯಿತು. ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳ ಚುನಾವಣೆಯಲ್ಲಿ, ಸ್ವತಂತ್ರವಾಗಿ ಆರಿಸಿ ಬಂದಿರುವ ಸದಸ್ಯನಿಗೆ ಉಪಾಧ್ಯಕ್ಷ ಸ್ಥಾನ ಕೊಡುವುದಾಗಿ ಜನತಾ ಸದಸ್ಯರು ಭರವಸೆಯಿತ್ತು, ತಾವು ಅಧ್ಯಕ್ಷ ಸ್ಥಾನ ಪಡೆದರು. ಆದರೆ ಉಪಾಧ್ಯಕ್ಷ ಸ್ಥಾನಕ್ಕೆ ಮತ ನೀಡುವಾಗ ಈ ಮಾತನ್ನು ನಡೆಸಿಕೊಡಲಿಲ್ಲ. ಇದರಿಂದ ಬೇಸತ್ತ ಸ್ವತಂತ್ರ ಸದಸ್ಯ ರಾಮಸಿಂಗ ಸವದತ್ತಿ ಅವರು, ಕೆಲ ಪ್ರಗತಿಪರ ಯುವಸದಸ್ಯರೊಂದಿಗೆ ಬಹುಮತ ಪಡೆದು ತಮ್ಮದೇ ಆದ ಸಮಿತಿ ಅಧ್ಯಕ್ಷರನ್ನು ಆರಿಸಿಕೊಂಡು ಜನತಾ ಸದಸ್ಯರಿಗೆ ಸರಿಯಾದ ಉತ್ತರ ಕೊಟ್ಟರು. ಅಲ್ಲದೆ ಮನೆತೆರಿಗೆ ನಿರ್ಧರಿಸುವಾಗ ಹಳಿಯಾಳದ ಎಲ್ಲ ಬಡ ಜೋಪಡಿಗಳ ಮೇಲಿನ ಕರವನ್ನು ಕೈಬಿಡುವುದಾಗಿ ಬಹುಮತದ ಆಜ್ಞೆ ಹೊರಡಿಸಿದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತ ಕಾಂ. ಬಸಣ್ಣ ಪಟ್ಟೇಕರ ಅವರು ಕೂಡ ಈ ರಂಗದಲ್ಲಿದ್ದು ಅವರನ್ನು ವ್ಯವಸಾಯ ಉತ್ಪಾದನಾ ಮಾರಾಟಸಂಸ್ಥೆಯ ನಾಮಿನೇಟೆಡ್ ಡೈರೆಕ್ಟರ್ ಆಗಿ ಕಳಿಸಲಾಗಿದೆ. ○

ನೆರೆಪೀಡಿತ ರೈತರ ಸಾಲ ರದ್ದಾಗಲಿ

ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನ ರೈತಸಂಘದ ಪ್ರತಿನಿಧಿ ಸಭೆಯು ದಿನಾಂಕ 30-8-79 ರಂದು ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ರೈತಸಂಘದ ಅಧ್ಯಕ್ಷರಾದ ಕಾಂ. ಅಬ್ರಹಾಂ ಕರ್ಕಡ ಅವರು ವಹಿಸಿದರು. ಸಭೆಯಲ್ಲಿ ಹಳಿಯಾಳದ ರೈತ ಚಳುವಳಿಯಲ್ಲಿ ಹುತಾತ್ಮರಾದ ಮಾರುತಿ ಪವಾರ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ತಾಲ್ಲೂಕಿನ ವಿವಿಧ ಗ್ರಾಮಗಳಿಂದ ಬಂದಿದ್ದ ಪ್ರತಿನಿಧಿಗಳನ್ನು ಉದ್ದೇಶಿಸಿ ವಿಮಾನೌಕರರ ಸಂಘದ ಮುಂದಾಳು ಕಾಂ. ಬಿ. ಮಾಧವ ಅವರು ಮಾತನಾಡಿದರು. ನಂತರ ಜಿಲ್ಲೆಯ ರೈತ ಚಳುವಳಿಗಳ ಅನುಭವಗಳನ್ನು ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಯು. ಜನಾರ್ಧನ ನಾಯಕ್ ಅವರು ವಿವರಿಸಿದರು. ಸಭೆಯಲ್ಲಿ ತಾಲ್ಲೂಕು ರೈತಸಂಘವನ್ನು ರಚಿಸಲಾಯಿತು.

ನೆರೆಪೀಡಿತರ ಸಾಲಗಳನ್ನು ರದ್ದುಗೊಳಿಸುವಂತೆ, ಪರಿಹಾರವಿಲ್ಲದೆ ರೈತರಿಗೆ ಭೂ ಒಡೆತನ ನೀಡುವಂತೆ, ಸೊಸೈಟಿ ಸಾಲಗಳ ವಸೂಲಾತಿಯಲ್ಲಿ ರೈತರನ್ನು ಬೆದರಿಸದಿರುವಂತೆ ಸರ್ಕಾರಕ್ಕೆ ಮನವಿ ಮಾಡಲಾಯಿತು. ಮಟ್ಟುವಿನಲ್ಲಿ ಹಾಕಿರುವ ಅಣೆಕಟ್ಟಿನಿಂದಾಗಿ ನೂರಾರು ಎಕರೆ ಭೂಮಿಯ ಸಾಗುವಳಿಗೆ ತೊಂದರೆಯಾಗಿರುವುದರಿಂದ ತಜ್ಞರ ಸಲಹೆ ಪಡೆದು ಅದನ್ನು ದುರಸ್ತಿಪಡಿಸಬೇಕೆಂದು ಕೋರಿಕೊಳ್ಳಲಾಯಿತು. ಕುತ್ಯಾರು ಗ್ರಾಮದ ದೊಡ್ಡತೋಡಿನ ದಂಡೆಯ ರಿಪೇರಿ ಬಗ್ಗೆ ಗ್ರಾಮ ರೈತರು ಕೊಟ್ಟಿರುವ ಅರ್ಜಿಯನ್ನು ಪರಿಶೀಲಿಸುವಂತೆ ಅಧಿಕಾರಿಗಳನ್ನು ಒತ್ತಾಯಿಸಲಾಯಿತು.

ಬಸ್ಸುಶುಲ್ಕ ರಿಯಾಯಿತಿ ಮತ್ತಿತರ ಬೇಡಿಕೆಗಳಿಗಾಗಿ ಹೋರಾಟ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಭೆಯಲ್ಲಿ ಬೆಂಬಲ ವ್ಯಕ್ತಪಡಿಸಲಾಯಿತು. ○

ತೀರ್ಥಹಳ್ಳಿಯಲ್ಲಿ ಎಸ್.ಎಫ್.ಐ. ಸಭೆ

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಭಾರತ ವಿದ್ಯಾರ್ಥಿ ಫೆಡರೇಶನ್ನಿನ ಶಾಖೆಯು 21-8-79 ರಂದು ಸಭೆ ಸೇರಿತ್ತು. ಸಭೆಯ ಅಧ್ಯಕ್ಷತೆಯನ್ನು ಎಸ್.ಎಫ್.ಐ. ತಾಲ್ಲೂಕು ಸಮಿತಿ ಉಪಾಧ್ಯಕ್ಷರಾದ ಕೆ. ವಿ. ಮುದ್ದಯ್ಯ ಅವರು ವಹಿಸಿದ್ದರು. ಸಮಾಜದ ಆರ್ಥಿಕ, ರಾಜಕೀಯ ಸಮಸ್ಯೆಗಳು, ನಿರುದ್ಯೋಗ ಮುಂತಾದ್ದರ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಲಾಯಿತು. ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹಾರಕ್ಕಾಗಿ ಅಧಿಕ ಸಂಖ್ಯೆಯಲ್ಲಿ ಅವರನ್ನು ಸಂಘಟಿಸಲು ನಿರ್ಧರಿಸಲಾಯಿತು. ತಿಪಟೂರಿನ ಎಸ್.ಎಫ್.ಐ. ಕಾರ್ಯಕರ್ತರಮೇಲೆ ನಡೆದ ಹಲ್ಲೆಯನ್ನು ಸಭೆ ಖಂಡಿಸಿತು. ●

ನಿಧನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿತಚಿಂತಕರೂ ಐಕ್ಯರಂಗದ ಅಭಿಮಾನಿಗಳೂ ಆದ ಶಂಕರ ಸೇರೆಗಾರ ಅವರು ಎಳೆಪ್ರಾಯದಲ್ಲಿ ಇತ್ತೀಚೆಗೆ ನಿಧನರಾದರು. ಇದಕ್ಕೆ ಪಕ್ಷದ ಕೊಡವೂರು ಶಾಖೆಯು (ಉಡುಪಿ) ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ.

ಸಂಪಾದಕೀಯ

[ಒಂದನೇ ಪುಟದಿಂದ]

ಕರ್ನಾಟಕವನ್ನು ತನ್ನ ಕಪಿಮುಷ್ಟಿಯೊಳಗೆ ತರಲು ಶತಪ್ರಯತ್ನ ನಡೆಸುತ್ತಿದ್ದಾರೆ. ಈ ಸರ್ವಾಧಿಕಾರಿ ಶಕ್ತಿಯು ಪುನಃ ತಲೆಯೆತ್ತದಂತೆ ಮಾಡುವುದು ಕನ್ನಡಿಗರ ಕರ್ತವ್ಯವಾಗಿದೆ. ಆರೆಸ್ಸೆಸ್ - ಜನಸಂಘೀಯ ಜಾತೀಯ ಶಕ್ತಿಯನ್ನು ಎದುರಿಸುವಾಗಲೇ ಈ ಸರ್ವಾಧಿಕಾರಿ ಶಕ್ತಿಯು ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುವುದನ್ನು ಕರ್ನಾಟಕದ ಜನತೆ ಎದುರಿಸುವುದು ಅತ್ಯಗತ್ಯ. ನಮ್ಮ ರಾಜ್ಯದ ಕಾರ್ಮಿಕರೂ, ರೈತರೂ, ವಿದ್ಯಾರ್ಥಿಗಳೂ, ಯುವಕರೂ, ಇತರ ಎಲ್ಲ ಪ್ರಜಾಪ್ರಭುತ್ವವಾದಿಗಳೂ ತಮ್ಮ ಬೇಡಿಕೆಗೆ ಹೋರಾಡುವುದರ ಜೊತೆಗೆ ಈ ಅಪಾಯದ ಬಗ್ಗೆ ರಾಜ್ಯಾದ್ಯಂತ ಪ್ರಚಾರಮಾಡಿ ಅವರನ್ನು ಈ ಹೋರಾಟದ ಕಣಕ್ಕಿಳಿಸುತ್ತಾರೆಂದು ನಂಬಿದ್ದೇವೆ. ●

ಕೆ.ಜಿ.ಎಫ್. ನಲ್ಲಿ ಬೃಹತ್ ಸಭೆ

[ಒಂದನೇ ಪುಟದಿಂದ]

ಭಾರತ್ ಗೋಲ್ಡ್ ಮೈನ್ಸ್‌ನಲ್ಲಿ ಉತ್ಪಾದಿಸಲ್ಪಡುವ ಚಿನ್ನಕ್ಕೆ ಭಾರತದ ಮಾರುಕಟ್ಟೆಯ ಹರಾಜು ಬೆಲೆಯನ್ನಾದರೂ ನಿಗದಿ ಮಾಡಬೇಕು ;

ಇ. ಎಸ್. ಐ. ಆಸ್ಪತ್ರೆಗಳಿಗೆ ಸೂಕ್ತವಾದ ಔಷಧಿಗಳನ್ನು ಒದಗಿಸಬೇಕೆಂದು, ಇ. ಎಸ್. ಐ. ಕಾರ್ಪೊರೇಶನ್‌ಗೆ ಒತ್ತಾಯಿಸುವ ;

ಪ್ರಾವಿಡೆಂಟ್ ಫಂಡಿನ ಹಣ ಸಿಗುವಲ್ಲಿ ಆಗುವ ವಿಳಂಬ ನೀತಿ, ಮತ್ತು ಪ್ರಾವಿಡೆಂಟ್ ಹಣದ ಮೇಲೆ ಸಿಗುವ ಸಾಲ ಇವುಗಳನ್ನೆಲ್ಲಾ ತೀವ್ರವಾಗಿ ಬಗೆಹರಿಸಬೇಕು ;

ದಿನನಿತ್ಯ ಬಳಕೆಯ ವಸ್ತುಗಳ ಏರುತ್ತಿರುವ ಬೆಲೆಗಳನ್ನು ಇಳಿಸಲು ಸರಕಾರವು ಪ್ರಯತ್ನಿಸಬೇಕೆಂದೂ, ಇಲ್ಲದಿದ್ದರೆ ಈ ಬೇಡಿಕೆಯನ್ನಿಟ್ಟು ಹೋರಾಡುವ;

ಸೆಪ್ಟೆಂಬರ್ 14 ರ ಸಾರ್ವಜನಿಕ ವಲಯದ ಕಾರ್ಮಿಕರ ಮುಷ್ಕರ ಯಶಸ್ವಿಗೊಳಿಸುವ;ಹೋರಾಟದ ಪಥದಲ್ಲಿರುವ ರಾಜ್ಯ ಮುನ್ಸಿಪಲ್ ನೌಕರರಿಗೆ ಬೆಂಬಲ ಸೂಚಿಸುವ; ಬಂಗಾರ್‌ಪೇಟೆ ಮತ್ತು ಬೆಂಗಳೂರಿನ ನಡುವಿನ ನೇರೊಗೇಜ್ ರೈಲ್ವೆಯನ್ನು ಬ್ರಾಡ್‌ಗೇಜ್‌ಗೆ ಪರಿವರ್ತಿಸಬೇಕೆಂದು ಒತ್ತಾಯಿಸುವ-ಇವೇ ಮೊದಲಾದ ನಿರ್ಣಯಗಳನ್ನು ಕೈಗೊಳ್ಳಲಾಯಿತು. ○

ಕಡಬದಲ್ಲಿ ಎಸ್.ಎಫ್.ಐ. ಸಭೆ

ತಾ. 1-9-1979 ರಂದು ಮಧ್ಯಾಹ್ನ ದ. ಕ. ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕಡಬದಲ್ಲಿ ಕಡಬಸರಕಾರೀ ಹೈಸ್ಕೂಲಿನ ಎಸ್. ಎಫ್. ಐ. ಘಟಕದ ಸಭೆ ಸೇರಿತು.

ಆರಂಭದಲ್ಲಿ ಕಡಬ ಎಸ್. ಎಫ್. ಐ. ಘಟಕದ ಅಧ್ಯಕ್ಷ ಕಾಂ. ಸಿ. ಕೆ. ಸೈಮನ್ ಸ್ವಾಗತಿಸಿದರು. ಜಿಲ್ಲಾ ಎಸ್. ಎಫ್. ಐ. ಕಾರ್ಯದರ್ಶಿ ಕಾಂ. ಶ್ರೀನಿವಾಸ ನಾಟೇಕರ್‌ರವರು ಧ್ಯೇಯ ಧೋರಣೆಗಳ ಬಗ್ಗೆ ವಿವರಿಸಿದರು. ಮಂಗಳೂರು ತಾಲ್ಲೂಕು ಕಾರ್ಯದರ್ಶಿ ಕಾಂ. ಚಂದ್ರಕಾಂತ್‌ರವರು ಬೇಡಿಕೆಗಳು ಮತ್ತು ಬೇಡಿಕೆ ದಿನಾಚರಣೆಯ ಬಗ್ಗೆ ವಿವರಿಸಿದರು.

ನಂತರ ತುಳಸೀದಾಸ್ ಅಧ್ಯಕ್ಷರಾಗಿಯೂ, ಇಸ್ಮಾಯಿಲ್ ಕಾರ್ಯದರ್ಶಿಯಾಗಿಯೂ, ಕಾಂ. ಸೂರ್ಯನಾರಾಯಣ ಭಟ್ ಖಜಾಂಚಿಯಾಗಿಯೂ ಇರುವ 14 ಜನರ ಸಮಿತಿಯನ್ನು ಆರಿಸಲಾಯಿತು. ಹೆಚ್ಚಿಗೆ ಸದಸ್ಯತನವನ್ನು ಮಾಡಲು ತೀರ್ಮಾನಿಸಲಾಯಿತು.

ಎಸ್. ಎಫ್. ಐ. ಕೆಳಸಮಿತಿಗಳ ಅವಗಾಹನೆಗೆ-
“ ರಾಜ್ಯಮಟ್ಟದ ತರಬೇತಿ ಶಿಬಿರ ”

ಎಸ್.ಎಫ್.ಐ. ಕಾರ್ಯಕರ್ತರುಗಳ ರಾಜ್ಯಮಟ್ಟದ ನಾಲ್ಕು ದಿನಗಳ ತರಬೇತಿ ಶಿಬಿರವು ತಾ. 15-9-79 ಬೆಳಗ್ಗೆ 9ಗಂಟೆಯಿಂದ 18-9-79 ಸಂಜೆಯತನಕ ನಡೆಯುವುದು. ಶಿಬಿರವು ದ. ಕ. ಜಿಲ್ಲೆಯ ಉಡುಪಿಯಲ್ಲಿ, ಉಡುಪಿ-ಮಣಿಪಾಲ ರಸ್ತೆಯ ಕುಂಜಿಬೆಟ್ಟಿನ ಶಾರದಾ ಕಲ್ಯಾಣ ಮಂಟಪದಲ್ಲಿ ಜರಗಲಿರುವುದು. ಎಲ್ಲಾ ಸಮಿತಿಗಳೂ ನಿಗದಿಯಾದ ಸಂಖ್ಯೆಯಲ್ಲಿ ಕಾರ್ಯಕರ್ತರನ್ನು ಕಳುಹಿಸಬೇಕು. 14ರ ರಾತ್ರಿ ಅಥವಾ 15ರ ಬೆಳಗ್ಗೆ ಉಡುಪಿಯನ್ನು ತಲುಪಬೇಕು.

ಮು. ಇಕ್ಬಾಲ್ ಹುಸೇನ್
ರಾಜ್ಯಸಮಿತಿಯ ಅಧ್ಯಕ್ಷ

ಸಂ. ರಾ. ಶಾಂತರೇಣುಕಾರಾಧ್ಯ
ರಾಜ್ಯಸಮಿತಿ ಪ್ರಧಾನ ಕಾರ್ಯದರ್ಶಿ

ತೆರಿಗೆ ವಿರೋಧಿಸಿ ಬಂಟ್ವಾಳ ಬಂದ್

ದ. ಕ. ಜಿಲ್ಲೆಯ ಬಂಟ್ವಾಳ ಪುರಸಭೆಗೊಳಪಟ್ಟ ಬಂಟ್ವಾಳ, ಬಿ. ಸಿ. ರೋಡ್, ಪಾಣೆಮಂಗಳೂರು ಪ್ರದೇಶಗಳಲ್ಲಿ ಬಂಟ್ವಾಳ ಪುರಸಭೆಯು ಹೇರಿರುವ ಮಿತಿಮೀರಿದ ತೆರಿಗೆಯನ್ನು ವಿರೋಧಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಂಟ್ವಾಳ ತಾಲ್ಲೂಕು ಸಮಿತಿಯು ನೀಡಿದ ಕರೆಯ ಮೇರೆಗೆ ತಾ. 29-8-79 ರಂದು ಯಶಸ್ವೀ ಹರತಾಳವನ್ನು ಆಚರಿಸಲಾಯಿತು.

1978-79 ಸಾಲಿನ ತೆರಿಗೆಯನ್ನು ಪುನರ್‌ಪರಿಶೀಲನೆ ಮಾಡಬೇಕು ; ಈಗ ಹೇರಿದ ಹೆಚ್ಚಿನ ತೆರಿಗೆಯನ್ನು ರದ್ದುಗೊಳಿಸಬೇಕು ; ಬಂಟ್ವಾಳ ಬಡ್ಡಕಟ್ಟೆ ಮಾರ್ಗದ ಬದಿಯಲ್ಲಿ ನಿಲ್ಲುವ ರಿಕ್ಷಾ, ಟ್ಯಾಕ್ಸಿ, ಬಸ್ಸುಗಳು ರಸ್ತೆಬದಿಯಲ್ಲಿಯೇ ನಿಲ್ಲುವುದರಿಂದ ಶಾಲಾಮಕ್ಕಳಿಗೆ ಮತ್ತು ದಾರಿಹೋಕರಿಗೆ ತೊಂದರೆಯಾಗುವುದರಿಂದ ಇವುಗಳಿಗೆ ನಿಲ್ಲುವುದಕ್ಕೆ ಪ್ರತ್ಯೇಕ ತಂಗುದಾಣದ ವ್ಯವಸ್ಥೆಯಾಗಬೇಕು ಎಂಬಿತ್ಯಾದಿ ಬೇಡಿಕೆಗಳನ್ನೊಳಗೊಂಡ ಮನವಿಪತ್ರವನ್ನು ಬೃಹತ್ ಮೆರವಣಿಗೆ ಮೂಲಕ ಹೋಗಿ ಪುರಸಭೆಯ ಅಧ್ಯಕ್ಷರಿಗೆ ಅರ್ಪಿಸಲಾಯಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ದ. ಕ. ಜಿಲ್ಲಾ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್, ಸ್ಥಳೀಯ ಮುಂದಾಳುಗಳಾದ ಕಾಂ. ಬಿ. ನಾರಾಯಣ, ಕಾಂ. ಬಿ. ಮಂಜುನಾಥ ಸಫಲ್ಯ, ಕಾಂ. ಬಿ. ಎಚ್. ಬಂಗೇರ, ಕಾಂ. ಸಂಜೀವ ಬಂಗೇರ, ಕಾಂ. ಬಿ. ಗೋಪಾಲಗೌಡ, ಕಾಂ. ಬಾಬು ಸುವರ್ಣ, ಕಾಂ. ರುಕ್ಮಯ್ಯ ಪೂಜಾರಿ ಮತ್ತು ಕಾಂ. ಓಬಯ್ಯ ಬಂಗೇರ ವಹಿಸಿದ್ದರು.

ಬಳಿಕ ಬಂಟ್ವಾಳ ಬಡ್ಡಕಟ್ಟೆಯಲ್ಲಿ ಕಾಂ. ಬಿ. ಎಚ್. ಬಂಗೇರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಕಾಂ. ರಾಮಚಂದ್ರ ರಾವ್ ಅವರು ಮಾತನಾಡಿದರು.

ಹರತಾಳಕ್ಕೆ ಸ್ಥಳೀಯ ಜನತಾಪಕ್ಷ, ಮುಸ್ಲಿಮ್ ಲೀಗ್‌ಗಳು ಬೆಂಬಲವಿತ್ತಿದ್ದುವು. ○

ಪುತ್ತೂರಿನಲ್ಲಿ ರೈತ-ದರ್ಕಾಸ್ತುದಾರರ ಸತ್ಯಾಗ್ರಹ

ತಾ. 3-9- 1979ನೇ ಸೋಮವಾರ ದ. ಕ. ಜಿಲ್ಲೆಯ ಪುತ್ತೂರು ತಾಲ್ಲೂಕು ರೈತಸಂಘದ ನೇತೃತ್ವದಲ್ಲಿ ತಾಲ್ಲೂಕು ಕಚೇರಿಯೆದುರು ನೂರಾರು ರೈತರು ಮತ್ತು ದರ್ಕಾಸ್ತುದಾರರು ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಸತ್ಯಾಗ್ರಹ ನಡೆಸಿದರು. ಪ. ಬಂಗಾಳದ ಎಡರಂಗ ಸರಕಾರದಂತೆ ರೈತರಿಗೆ ಬಡ್ಡಿರಹಿತ ಸಾಲ ಒದಗಿಸಬೇಕು, ರೈತರಿಗೆ ಪರಿಹಾರವಿಲ್ಲದೆ ಭೂಮಿ ಹಂಚಬೇಕು, ಮತ್ತು ಹತ್ತಿಪ್ಪತ್ತು ವರ್ಷಗಳಿಂದ ಸರಕಾರೀ ಬಂಜರು ಭೂಮಿಯಲ್ಲಿ ಬೇಸಾಯ ಮಾಡುತ್ತಾ ಬಂದಿರುವ ಕೃಷಿಕರಿಗೆ ಆ ಭೂಮಿಗಳನ್ನು ಯಾವುದೇ ರೀತಿಯ ದಂಡನೆಗಳನ್ನು ವಸೂಲು ಮಾಡದೆ ದರ್ಕಾಸ್ತು ನೀಡಬೇಕು ಮುಂತಾದ ಬೇಡಿಕೆಗಳುಳ್ಳ ಮನವಿಯನ್ನು ರಾಜ್ಯದ ಕಂದಾಯ ಸಚಿವರಿಗೆ ತಾಲ್ಲೂಕು ರೈತಸಂಘದ ಪ್ರತಿನಿಧಿಗಳು ಅರ್ಪಿಸಿದರು.

ನಂತರ ಸಂಜೆ ಟೌನ್‌ಬ್ಯಾಂಕ್‌ನ ಹಾಲ್‌ನಲ್ಲಿ ತಾಲ್ಲೂಕು ರೈತಸಂಘದ ಸಮಿತಿ ಸದಸ್ಯ ಕಾಂ. ಎಚ್. ಲಕ್ಷ್ಮಣ ಗೌಡರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಜನಾರ್ದನ ನಾಯಕ್‌ರವರು ರೈತರ ಮೇಲೆ ನಡೆಯುತ್ತಿರುವ ಅನ್ಯಾಯ ಹಾಗೂ ಸರಕಾರವು ಕಳೆದ 30 ವರ್ಷಗಳಿಂದ ರೈತ-ಕೃಷಿಕೂಲಿಗಾರರನ್ನು ವಂಚಿಸಿ ಭೂಮಾಲಕ ಪರ ಧೋರಣೆಯನ್ನು ಅನುಸರಿಸಿದ ವಿಧಾನವನ್ನು ವಿವರಿಸಿದರು. ತಾಲ್ಲೂಕಿನಾದ್ಯಂತ ರೈತ-ದರ್ಕಾಸ್ತುದಾರರ ಮೇಲೆ ರೆವಿನ್ಯೂ ಅಧಿಕಾರಿಗಳ ಕಿರುಕುಳಗಳ ಬಗ್ಗೆ ವಿವರಿಸಿದರು.

ಆರಂಭದಲ್ಲಿ ಕಾಂ. ಬಿ. ರಾಮಕೃಷ್ಣನವರು ಸ್ವಾಗತಿಸಿದರು ಕೊನೆಯಲ್ಲಿ ಕಾಂ. ಸಬೆಸ್ಟಿಯನ್ ಧನ್ಯವಾದವಿತ್ತರು.

ಸತ್ಯಾಗ್ರಹದ ಮೊದಲು ನೂರಾರು ರೈತ-ದರ್ಕಾಸ್ತುದಾರರು ಕೆಂಬಾವುಟಗಳೊಂದಿಗೆ ಘೋಷಣೆಗಳನ್ನು ಕೂಗಿ ನಗರದಲ್ಲಿ ಮೆರವಣಿಗೆ ನಡೆಸಿದರು. ○

ಯುವಕರಿಂದ ಶ್ರಮದಾನ

ದ. ಕ. ಜಿಲ್ಲಾ ಕುಂದಾಪುರ ತಾಲ್ಲೂಕು ಕೋಣಿ ಗ್ರಾಮ ಪಂಚಾಯತಿಯಿಂದ ಮಂಜೂರಾದ ಕಾಲುಸಂಕ (Foot Bridge) ವನ್ನು ಸೆಪ್ಟೆಂಬರ್ 2 ರಂದು ಸ್ಥಳೀಯ ಯುವಕಮಂಡಲದ ಸದಸ್ಯರು ಶ್ರಮದಾನದ ಮೂಲಕ ನೆರವೇರಿಸಿದರು.

ಯುವಕಮಂಡಲದ ಹಿರಿಯ ಸದಸ್ಯರಾದ ಶ್ರೀ ಕೆ. ಏಡ್ವಿನ್ ಡೇಸ್‌ರವರು ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಉತ್ಸಾಹದಿಂದ ಶ್ರಮದಾನದಲ್ಲಿ ಪಾಲ್ಗೊಂಡಿದ್ದರು ಕೊನೆಯಲ್ಲಿ ಸದಸ್ಯರ ಕೆಲಸವನ್ನು ಮೆಚ್ಚಿ ಜೋನ್ ಡಿ. ಸೋಜರವರು ಲಘು ಉಪಹಾರದ ವ್ಯವಸ್ಥೆಯನ್ನು ಮಾಡಿದರು. ●

ಪರಿಸರ

ಈ ದೇಶದಲ್ಲಿ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ತೀರಾ ಕಡಿಮೆ. ಪಟ್ಟಣಗಳಲ್ಲಿ ವಾಸಿ. ಹಳ್ಳಿಗಳಲ್ಲಿ ವೈದ್ಯಕೀಯ ಸೌಲಭ್ಯ ಇಲ್ಲವೇ ಇಲ್ಲ ಎಂದರೂ ಸಂದೀತು. ನಮ್ಮ ಸರ್ಕಾರಿ ಆಸ್ಪತ್ರೆಗಳ ವಿಷಯ ಬರೆಯದಿರುವುದೇ ಲೇಸು. ಚೀನದಲ್ಲಿ “ಬರಿಗಾಲು ವೈದ್ಯರ” ಸೇನೆಯೇ ಕೆಲಸ ಮಾಡುತ್ತಿದೆ. ಭಾರತಕ್ಕೂ ಇಂಥ ವೈದ್ಯರ ತಂಡಬೇಕು.

—“ಕನ್ನಡಪ್ರಭ”

ಕಳೆದ ಮೂರು ವರ್ಷಗಳಲ್ಲಿ ಆಹಾರದ ಫಸಲು ಸಮೃದ್ಧವಾಗಿದ್ದರೂ ಜಗತ್ತಿನಲ್ಲಿ ನೂರು ಕೋಟಿಗೂ ಹೆಚ್ಚು ಜನ ಇಂದು ಹಸಿವಿನಿಂದ ನರಳುತ್ತಿದ್ದಾರೆ.

—(ಒಟ್ಟಾವದಲ್ಲಿ ನಡೆದ ವಿಶ್ವ ಆಹಾರ ಮಂಡಳಿಯ ವರದಿಯಿಂದ)

ಜಗಜೀವನ್‌ರಾಮ್ ಅವರು ಹರಿಜನ ವಂಶದ ಬ್ರಾಹ್ಮಣ. ಹರಿಜನರಿಗೆ ಅವರಿಂದ ಆಗಿರುವಷ್ಟು ನಷ್ಟ ಬೇರೆ ಯಾರಿಂದಲೂ ಆಗಿಲ್ಲ.

—ರಾಜ್‌ನಾರಾಯಣ್

ಜಗಜೀವನ್‌ರಾಮ್ ಅವರು ಆರ್. ಎಸ್. ಎಸ್.-ಜನಸಂಘದಂತಹ ಜಾತೀವಾದಿಗಳೊಂದಿಗೆ ಸಂಬಂಧ ಹೊಂದಿರುವ ಕಾರಣ, ಹರಿಜನ ಮತದಾರರನ್ನು ಈ ಚುನಾವಣೆಗಳಲ್ಲಿ ಆಕರ್ಷಿಸಲು ಸಾಧ್ಯವಾಗಲಾರದು. ರಾಮ್ ಅವರು ಹರಿಜನ ನಾಯಕರಿರಬಹುದು. ಆದರೆ ಅವರು ಹರಿಜನರ ನಾಯಕರಲ್ಲ.

—ಬಿ. ಶಂಕರಾನಂದ್
(ಕಾಂಗ್ರೆ ಪಕ್ಷದ ಹರಿಜನ ಸೆಲ್‌ನ ಸಂಚಾಲಕ ಹಾಗೂ ಮಾಜೀ ಸಂಸತ್ ಸದಸ್ಯ)

ಇಂದಿರಾಗಾಂಧಿ ಮತ್ತು ಆರ್. ಎಸ್. ಎಸ್. ನಡುವೆ ಗುಪ್ತ ಒಡಂಬಡಿಕೆ ಇದೆ.

—ರಬಿರಾಯ್
(ಕೇಂದ್ರ ಆರೋಗ್ಯ ಸಚಿವರು)

ಸುಪ್ರೀಂ ಕೋರ್ಟಿನಲ್ಲಿ ಇಂದಿರಾಗಾಂಧಿಯು ರಾಜ್‌ನಾರಾಯಣ್ ವಿರುದ್ಧ ಚುನಾವಣಾ ತಕರಾರು ಅರ್ಜಿಯನ್ನು “ಗೆದ್ದಾಗ” ಇಂದಿರಾಗಾಂಧಿಯನ್ನು ಅಭಿನಂದಿಸಿದವರು ಆರ್. ಎಸ್. ಎಸ್.ನ ಮುಖ್ಯಸ್ಥ ಶ್ರೀ ಬಾಳಾಸಾಹೇಬ್ ದೇವರಸ್

ಮಧು ಲಿಮಯೆ
(ಸಮಾಜವಾದಿ ಪಕ್ಷದ ಧುರೀಣ)

ಈ ಸಲ ಸಂಸತ್ತಿನಲ್ಲಿ ಎಡ ಪಕ್ಷಗಳ ಪ್ರಾತಿನಿಧ್ಯ ಹೆಚ್ಚಾಗುವುದು.

—ಇ. ಎಂ. ಎಸ್. ನಂಬೂದಿರಿಪಾದ್

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT